ಸಂಪುಟ 01 | ಸಂಚಿಕೆ 132 | ಮಂಗಳವಾರ 31 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಮಹಾವೀರ ಜಯಂತಿ**

ಮಾರ್ಚ್ 31 ರಂದು ಮಹಾವೀರ ಜಯಂತಿಯು ಜೈನ ಧರ್ಮದ 24 ನೇ ತೀರ್ಥಂಕರರಾದ ಭಗವಾನ್ ಮಹಾವೀರರ ಜನ್ಮ ವಾರ್ಷಿಕೋತ್ಸವವನ್ನು ಸೂಚಿಸುತ್ತದೆ.
ಈ ದಿನವನ್ನು ಪ್ರಾರ್ಥನೆಗಳು, ಮೆರವಣಿಗೆಗಳು ಮತ್ತು ಶಾಂತಿ, ಅಹಿಂಸೆ ಮತ್ತು ಕರುಣೆಯ ಮೌಲ್ಯಗಳನ್ನು ಉತ್ತೇಜಿಸುವ ದಯೆಯ ಕಾರ್ಯಗಳೊಂದಿಗೆ ಆಚರಿಸಲಾಗುತ್ತದೆ.

**2) ಮಾರ್ಸ್ ಐಫೆಲ್ ಟವರ್ ದಿನ**

ಪ್ರತಿ ವರ್ಷ ಮಾರ್ಚ್ 31 ರಂದು, ಗೋಪುರದ ಉದ್ಘಾಟನೆಯ ಗೌರವಾರ್ಥವಾಗಿ ಐಫೆಲ್ ಟವರ್ ದಿನವನ್ನು ಆಚರಿಸಲಾಗುತ್ತದೆ. 1889 ರಲ್ಲಿ ಈ ದಿನದಂದು, ಗಗನಚುಂಬಿ ಕಟ್ಟಡವನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಲಾಯಿತು. ಮತ್ತು 134 ವರ್ಷಗಳ ನಂತರವೂ, ಈ ಸ್ಮಾರಕವು ಪ್ರತಿದಿನ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತಲೇ ಇದೆ.

## ಸುಭಾಷಿತ

ನಿಮ್ಮ ಗುರಿಗಳನ್ನು ನಿಮ್ಮ ಸಾಮರ್ಥ್ಯದ ಮಟ್ಟಕ್ಕೆ ಇಳಿಸಬೇಡಿ. ಬದಲಾಗಿ, ನಿಮ್ಮ ಸಾಮರ್ಥ್ಯವನ್ನು ನಿಮ್ಮ ಗುರಿಗಳ ಎತ್ತರಕ್ಕೆ ಏರಿಸಿ

ಸ್ವಾಮಿ ವಿವೇಕಾನಂದ

# ರೂಪಾಯಿ ಪುನಶ್ಚೇತನ :ಡಾಲರ್ ಎದುರು 1.28 ರೂ. ಏರಿಕೆ

**ಮುಂಬೈ: ಭಾರತೀಯ ರೂಪಾಯಿ ಇಂದು ಆರಂಭಿಕ ವಹಿವಾಟಿನಲ್ಲಿ 128 ಪೈಸೆ ಏರಿಕೆ ಕಂಡು,ಅಮೆರಿಕನ್ ಡಾಲರ್ ಎದುರು 93.57 ಮಟ್ಟಕ್ಕೆ ತಲುಪಿದೆ. ರಿಸರ್ವ್ ಬ್ಯಾಂಕ್ ಕೈಗೊಂಡ ಕೆಲವು ನಿರ್ಧಾರದಿಂದ ರೂಪಾಯಿ ಬಲಗೊಂಡಿದೆ.ವಿದೇಶಿ ವಿನಿಮಯ ವಹಿವಾಟುದಾರರ ಪ್ರಕಾರ, ಸಾಮಾನ್ಯವಾಗಿ ಲಾಂಗ್ ಪೋಸಿಷನ್ ಹೊಂದಿರುವ ಬ್ಯಾಂಕುಗಳು ತಮ್ಮ ಹೂಡಿಕೆಗಳನ್ನು ಕಡಿತಗೊಳಿಸುವ ಸಾಧ್ಯತೆ ಇರುವುದರಿಂದ ರೂಪಾಯಿ ಆರಂಭದಲ್ಲೇ ಬಲವಾಗಿ ತೆರೆದಿದೆ.**



2026ರ ಮಾರ್ಚ್ 27ರ ವೃತ್ತಪತ್ರಿಕೆಯ ಮೂಲಕ ರಿಸರ್ವ್ ಬ್ಯಾಂಕ್, ಬ್ಯಾಂಕುಗಳ ನೆಟ್ ಓಪನ್ ಪೋಸಿಷನ್ ಮಿತಿಯನ್ನು 100 ಮಿಲಿಯನ್ ಅಮೆರಿಕನ್ ಡಾಲರ್‌ಗೆ ನಿಗದಿ ಮಾಡಿದ್ದು, ಏಪ್ರಿಲ್ 10ರೊಳಗೆ ಇದನ್ನು ಅನುಸರಿಸಬೇಕೆಂದು ಸೂಚಿಸಿದೆ. ಇಂಟರ್‌ಬ್ಯಾಂಕ್ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ 93.62ರಲ್ಲಿ ಆರಂಭವಾಗಿ, ಬಳಿಕ 93.57ಕ್ಕೆ ಏರಿಕೆಯಾಗಿ, ಹಿಂದಿನ ದಿನಕ್ಕಿಂತ 128 ಪೈಸೆ ಲಾಭ ದಾಖಲಿಸಿದೆ. ಇದಕ್ಕೂ ಮುನ್ನ ಶುಕ್ರವಾರ ರೂಪಾಯಿ 89 ಪೈಸೆ ಕುಸಿದು, 94.85 ಮಟ್ಟದಲ್ಲಿ ಐತಿಹಾಸಿಕ ಕನಿಷ್ಠ ಮಟ್ಟದಲ್ಲಿ ಮುಕ್ತಾಯಗೊಂಡಿತ್ತು. ಬ್ಯಾಂಕುಗಳು ತಮ ಹೂಡಿಕೆಗಳನ್ನು ಸರಿಹೊಂದಿಸಲು ಪ್ರಾರಂಭಿಸಿದಾಗ, ಡಾಲರ್ ಮಾರಾಟ ಹೆಚ್ಚಾಗಬಹುದು. ಇದರಿಂದ ತಾತ್ಕಾಲಿಕವಾಗಿ ರೂಪಾಯಿಗೆ ಬೆಂಬಲ ಸಿಗಬಹುದು ಎಂದು ಫಾರೆಕ್ಸ ಅಡ್ವೈಸರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಅಮಿತ್ ಪಬಾರಿ ಹೇಳಿದ್ದಾರೆ.

ಆದರೆ, ಡಾಲರ್ ಸೂಚ್ಯಂಕ ಮತ್ತು ಕಚ್ಚಾ ತೈಲದ ಬೆಲೆ ಏರಿಕೆ ರೂಪಾಯಿಗೆ ಒತ್ತಡ ತಂದಿದೆ. ಸುರಕ್ಷಿತ ಹೂಡಿಕೆ ಬೇಡಿಕೆಯ ಪರಿಣಾಮ ಡಾಲರ್ ಸೂಚ್ಯಂಕ 100 ಕ್ಕಿಂತ ಮೇಲೆಯೇ ಸ್ಥಿರವಾಗಿದ್ದು, ರೂಪಾಯಿಯ ಮೇಲಿನ ಒತ್ತಡವನ್ನು ಮುಂದುವರಿಸಿದೆ ಎಂದು ವಹಿವಾಟುದಾರರು ತಿಳಿಸಿದ್ದಾರೆ. ಜಾಗತಿಕ ತೈಲ ಮಾನದಂಡ ಬ್ರೆಂಟ್ ಕ್ರೂಡ್ ಪ್ರತಿ ಬ್ಯಾರೆಲ್‌ಗೆ 115 ಡಾಲರ್‌ಗೆ ಏರಿಕೆ ಕಂಡಿದೆ.ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು ತೈಲ ಬೆಲೆಗಳ ಮೇಲೆ ತಕ್ಷಣದ ಪರಿಣಾಮ ಬೀರಿದ್ದು, ಸರಬರಾಜು ವ್ಯತ್ಯಯದ ಭೀತಿಯಿಂದ ಬೆಲೆಗಳು ಏರಿಕೆಯಾಗಿವೆ.

ಭಾರತವು ಪ್ರಮುಖ ತೈಲ ಆಮದುದಾರ ದೇಶವಾಗಿರುವುದರಿಂದ, ತೈಲ ಬೆಲೆ ಏರಿಕೆ ಡಾಲರ್ ಬೇಡಿಕೆಯನ್ನು ಹೆಚ್ಚಿಸಿ ರೂಪಾಯಿಗೆ ಒತ್ತಡ ತರಲಿದೆ ಎಂದು ಪಬಾರಿ ಹೇಳಿದ್ದಾರೆ. ಇದರ ನಡುವೆ, ದೇಶೀಯ ಷೇರು ಮಾರುಕಟ್ಟೆಯಲ್ಲಿ ಸೆನ್ಸೆಕ್?ಸ 1,191.24 ಅಂಕ ಕುಸಿದು 72,391.98ಕ್ಕೆ ತಲುಪಿದ್ದು, ನಿಫ್ಟಿ 349.45 ಅಂಕ ಇಳಿದು 22,470.15 ಮಟ್ಟದಲ್ಲಿ ವಹಿವಾಟು ನಡೆಸಿತು.ವಿದೇಶಿ ಸಂಸ್ಥಾಗತ ಹೂಡಿಕೆದಾರರು ಶುಕ್ರವಾರ ಒಟ್ಟು ರೂ. 4,367.30 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ವಿನಿಮಯದ ಅಂಕಿಅಂಶಗಳು ತಿಳಿಸಿವೆ.

## ಸಿಂಧನೂರಿನಿಂದ ಸಿಕಂದರಾಬಾದಗೆ ನೂತನ ಬಸ್ ಸರ್ವಿಸ್ ಪ್ರಾರಂಭ

ನೈಜ್ಯ ದೆಸೆ ನ್ಯೂಸ್

**ಟಿ.ಜಿ.ಎಸ್.ಆರ್.ಟಿ.ಎಸ್ ತೆಲಂಗಾಣ ಮತ್ತು ಸಿಂಧನೂರಿನ ಕೆ.ಎಸ್.ಆರ್.ಟಿ.ಸಿ ವತಿಯಿಂದ ಸಿಕಂದರಾಬಾದ್ (ಜೆಬಿಎಸ್) ಗೆ ನೂತನ ಬಸ್ ಸರ್ವಿಸ್ ಪ್ರಾರಂಭವನ್ನು ಪ್ರಯಾಣಿಕರ ಜೊತೆಗೆ ರಿಬ್ಬನ್ ಕಟ್ ಮಾಡಿಸುವ ಮೂಲಕ ಚಾಲನೆ ಮಾಡಿದರು.**



ಈ ಸೇವೆಯವು ಪ್ರತಿದಿನ ಬೆಳಿಗ್ಗೆ 9 ಮತ್ತು ರಾತ್ರಿ 10 ಗಂಟೆಗೆ ಸಿಂಧನೂರಿನ ಜೆಬಿಎಸ್ ನಿಂದ ಬೆಳಗ್ಗೆ 11 ಗಂಟೆಗೆ ರಾತ್ರಿ 10.30ಕ್ಕೆ ಬಸ್ ಹೊರಡಲಿದೆ. ಪ್ರಯಾಣಿಕರು ಈ ಅವಕಾಶವನ್ನು ಬಳಸಿಕೊಳ್ಳುವಂತೆ ಡಿಪೋ ವ್ಯವಸ್ಥಾಪಕ ರವೀಂದರ್ ಅವರು ಮನವಿ ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಪಿಕೆಟ್ ಡಿಪೋ ಮೆನೇಜರ್ ರವೀಂದ್ರ, ಸ್ವಾಮಿ ವಿವೇಕಾನಂದ ಯುವ ವೇದಿಕೆಯ ಅಧ್ಯಕ್ಷ ಶ್ರೀನಿವಾಸ, ಸಿ.ವಿ.ಗೌಡ. ಕರುಣಾನಾಯುಡು, ಶ್ರೀನಿವಾಸ್, ಸಿ.ದಿ.ರೆಡ್ಡಿ, ಸಿಆರ್‌ಸಿ ಪಿಕೆಟ್ರಾಘವಯ್ಯ ಮತ್ತು ಪ್ರಯಾಣಿಕರು ಭಾಗವಹಿಸಿದ್ದರು.

## ಅಂಗಾಲಪರಮೇಶ್ವರಿ ದೇವರ 43ನೇ ವರ್ಷದ ಪೂಜಾ ಉತ್ಸವ ಬರ್ಮಾ ಕ್ಯಾಂಪ್



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಶ್ರೀ ಪಿಳಿಕಾನ್ ಮುನೇಶ್ವರ ಹಾಗೂ ಶ್ರೀ ಅಂಗಾಲಪರಮೇಶ್ವರಿ ದೇವರ 43ನೇ ವರ್ಷದ ಪೂಜಾ ಉತ್ಸವ ರಾಯಚೂರು ಜಿಲ್ಲಾ, ಸಿಂಧನೂರು ತಾಲೂಕಿನ ಪುನರ್ವಸತಿ ಕಾಲೋನಿ ನಂ. 01, ಬರ್ಮಾ ಕ್ಯಾಂಪ್‌ನಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ಭಕ್ತಿಭಾವದಿಂದ ಶ್ರೀ ಪಿಲಿಕಾಂ ಮುನೇಶ್ವರ ಹಾಗೂ ಶ್ರೀ ಅಂಗಾಲಪರಮೇಶ್ವರಿ ದೇವರ 43ನೇ ವರ್ಷದ ಪೂಜಾ ಉತ್ಸವವನ್ನು ವಿಜೃಂಭಣೆಯಿಂದ ಆಯೋಜಿಸಲಾಗಿದೆ.**

ಈ ಉತ್ಸವವು ಶಾಲಿವಾಹನ ಶಕೆ 1948ರ ಪರ ಭಾವನಾಮ ಸಂವತ್ಸರದ ಚೈತ್ರ ಮಾಸದ 5ನೇ ದಿನವಾದ ದಿನಾಂಕ 23–03–2026 ಸೋಮವಾರದಿಂದ ಆರಂಭವಾಗಿ, 01–04–2026 ಬುಧವಾರದವರೆಗೆ ನಡೆಯಲಿದೆ. ಈ ಅವಧಿಯಲ್ಲಿ ಪ್ರತಿದಿನವೂ ದೇವಸ್ಥಾನದಲ್ಲಿ ಸಾಯಂಕಾಲ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ನೆರವೇರಿಸಲ್ಪಡುವವು.ದಿನಾಂಕ 01–04–2026 ಬುಧವಾರ, ಉತ್ಸವದ ವಿಶೇಷ ಅಂಗವಾಗಿ ಅಗ್ನಿ ಪ್ರವೇಶ ಉತ್ಸವ ನಡೆಯಲಿದ್ದು, ಸಾರ್ವಜನಿಕರಿಗೆ ಅನ್ನಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಈ ಅನ್ನದಾಸೋಹವನ್ನು ಶ್ರೀಮತಿ ಮೀನಾ ಕಾಂಬೋ ಅವರ ಕುಟುಂಬದವರು ಪ್ರಾಯೋಜಿಸಿದ್ದಾರೆ. ಹಾಗೂ ದಿನಾಂಕ 02–04–2026 ಗುರುವಾರ, ಮಂಗಳ ಕಾರ್ಯಗಳೊಂದಿಗೆ ಉತ್ಸವವು ಸಮಾಪ್ತಿಗೊಳ್ಳಲಿದೆ. ಆದ್ದರಿಂದ ಸಕಲ ಭಕ್ತಾದಿಗಳು ಈ ಪವಿತ್ರ ಉತ್ಸವದಲ್ಲಿ ಭಾಗವಹಿಸಿ, ದೇವರ ಕೃಪೆಗೆ ಪಾತ್ರರಾಗಬೇಕೆಂದು ಕಾರ್ಯಕಾರಿ ಮಂಡಳಿಯ ಪರವಾಗಿ ವಿನಮ್ರವಾಗಿ ವಿನಂತಿಸಲಾಗುತ್ತದೆ. ಸ್ವಾಗತ ಕೋರುವವರು: ಅಧ್ಯಕ್ಷರು: ಎಸ್. ಆನಂದ್ ಅಲಗು ಕಾರ್ಯದರ್ಶಿ: ವಿ. ಸಂತೋಷ್ ಕುಮಾರ್ ವ್ಯವಸ್ಥಾಪಕರು ಹಾಗೂ ಕಾರ್ಯಕಾರಿ ಮಂಡಳಿಯ ಸರ್ವ ಸದಸ್ಯರು.

## ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಶಂಕೆ ಕಿಡಿಗೇಡಿಗಳ ಕೃತ್ಯ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಯಡಿವಾಳ ಗ್ರಾಮದಲ್ಲಿ ರೈತ ನಾಯಕ ಮೌಲಾಲಿ ಅವರ ಮೆಣಸಿನಕಾಯಿ ರಾಶಿಗಳಿಗೆ ಬೆಂಕಿ ಹಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸ ಮಾಹಿತಿ ಬೆಳಕಿಗೆ ಬಂದಿದೆ.**



ಸ್ಥಳದಲ್ಲಿ ಪೆಟ್ರೋಲ್ ಕ್ಯಾನ್ ಪತ್ತೆಯಾಗಿದ್ದು, ಪೆಟ್ರೋಲ್ ಸುರಿದು ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿರುವ ಶಂಕೆ ವ್ಯಕ್ತವಾಗಿದೆ. ಸುಮಾರು 10 ಲಕ್ಷ ರೂಪಾಯಿ ಮೌಲ್ಯದ ಮೆಣಸಿನಕಾಯಿ ಸಂಪೂರ್ಣವಾಗಿ ಸುಟ್ಟು ನಾಶವಾಗಿದ್ದು, ರೈತನಿಗೆ ಭಾರೀ ಆರ್ಥಿಕ ನಷ್ಟ ಉಂಟಾಗಿದೆ. ಹೊಲದಲ್ಲಿದ್ದ ಸಾಕ್ಷ್ಯಗಳು ಕಿಡಿಗೇಡಿಗಳ ಸಂಚು ಎನ್ನುವ ಅನುಮಾನವನ್ನು ಮತ್ತಷ್ಟು ಬಲಪಡಿಸುತ್ತಿವೆ.

ಗ್ರಾಮಸ್ಥರು ಘಟನೆಗೆ ತೀವ್ರ ಖಂಡನೆ ವ್ಯಕ್ತಪಡಿಸಿದ್ದು, ತಪ್ಪಿತಸ್ಥರನ್ನು ಶೀಘ್ರವಾಗಿ ಬಂಧಿಸಿ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ಪೊಲೀಸ್ ಇಲಾಖೆ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸುವುದು ಅಗತ್ಯವಾಗಿದೆ. ರೈತನಿಗೆ ತಕ್ಷಣ ಪರಿಹಾರ ನೀಡಬೇಕು ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂಬ ಬೇಡಿಕೆಯೂ ಕೇಳಿಬರುತ್ತಿದೆ.

## ಶ್ರೀ ವಿದ್ಯಾ ಭಾರತಿ ಶಿಕ್ಷಣ ಸಂಸ್ಥೆಯಿಂದ ಮಹಿಳೆಯರಿಗಾಗಿ ಉಚಿತ ಹೊಲಿಗೆ ತರಬೇತಿ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಬಿ.ಗಣೇಕಲ್ ಗ್ರಾಮದಲ್ಲಿ ಶ್ರೀ ವಿದ್ಯಾ ಭಾರತಿ ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ಮಹಿಳೆಯರಿಗಾಗಿ ಮೂರು ತಿಂಗಳ ಉಚಿತ ಹೊಲಿಗೆ ತರಬೇತಿ ಕಾರ್ಯಕ್ರಮವನ್ನು ಏ.1 ರಿಂದ ಆಯೋಜಿಸಲಾಗಿದೆ.**



ಸತತ ಏಳು ವರ್ಷಗಳಿಂದ ಗ್ರಾಮೀಣ ಭಾಗದ ಮಹಿಳೆಯರ ಸ್ವಾವಲಂಬನೆ ಜೀವನ ನಡೆಸಲು ಅನುಕೂಲವಾಗಲಿ ಎನ್ನುವ ಸದುದ್ದೇಶದಿಂದ ಈ ತರಬೇತಿ ಹಮ್ಮಿಕೊಳ್ಳಲಾಗುತ್ತದೆ. ಈ ತರಬೇತಿ ನುರಿತ ಅನುಭವದ ತರಬೇತಿದಾರರಿಂದ ಮಾರ್ಗದರ್ಶನ ಹಾಗೂ ಇತರೆ ಕೌಶಲ್ಯಗಳ ಬಗ್ಗೆ ತಿಳಿಸಲಾಗುವುದು. 18 ವರ್ಷ ವಯೋಮಿತಿ, ಯಾವುದೇ ವಿದ್ಯಾರ್ಹತೆ ಅವಶ್ಯಕತೆ ಇರುವುದಿಲ್ಲ, ಆಧಾರ್ ಕಾರ್ಡ್, ಎರಡು ಪೋಟೋ, ರೇಷನ್ ಕಾರ್ಡ್ ಹೊಂದಿರುವವರು ಈ ತರಬೇತಿಗೆ ಅರ್ಹರಾಗಿದ್ದಾರೆ.

ತರಬೇತಿಯು ಸಂಪೂರ್ಣ ಉಚಿತವಾಗಿದೆ ಎಂದು ಶ್ರೀ ವಿದ್ಯಾ ಭಾರತಿ ಎಜ್ಯುಕೇಶನ್ ಟ್ರಸ್ಟ್ ನ ಅಧ್ಯಕ್ಷರಾದ ಹಂಪಣ್ಣ ಪಲ್ಲೇದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9845670193, 9901296287 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ದೇವಾಲಯವು ಭಕ್ತರ ಆಧ್ಯಾತ್ಮಿಕ ಕೇಂದ್ರ :ಗುಂಜೂರು ಶ್ರೀನಿವಾಸರೆಡ್ಡಿ

ನೈಜ್ಯ ದೆಸೆ ನ್ಯೂಸ್

**ಬಾಗೇಪಲ್ಲಿ: ಚೇಳೂರು ತಾಲ್ಲೂಕಿನ ಪಾಳ್ಯಕೆರೆ ಗ್ರಾಮವು ಶನಿವಾರ ಭಕ್ತಿಭಾವದಿಂದ ಮೆರೆಯಿತು. ಗ್ರಾಮದ ಪ್ರಸಿದ್ಧ ಶ್ರೀ ಲಕ್ಷ್ಮೀ ವೆಂಕಟರವಣಸ್ವಾಮಿ ದೇವಾಲಯದಲ್ಲಿ ವಾರ್ಷಿಕೋತ್ಸವದ ಅಂಗವಾಗಿ ಜಾರುಟ್ಲು ಪರಷೆ ಹಾಗೂ ಕಲ್ಯಾಣೋತ್ಸವ ಕಾರ್ಯಕ್ರಮಗಳು ವಿಜೃಂಭಣೆಯಿಂದ ನೆರವೇರಿದ್ದು, ಸಾವಿರಾರು ಭಕ್ತರನ್ನು ಆಕರ್ಷಿಸಿತು.**

ಬೆಳಗ್ಗೆಯಿಂದಲೇ ದೇವಾಲಯದ ಆವರಣದಲ್ಲಿ ಮಂಗಳ ವಾದ್ಯಗಳ ನಾದ, ವೇದಘೋಷಗಳ ನಡುವೆ ಧಾರ್ಮಿಕ ವಿಧಿವಿಧಾನಗಳು ಆರಂಭವಾಗಿ, ಗ್ರಾಮವೇ ಒಂದು ಹಬ್ಬದ ರಂಗು ಪಡೆದುಕೊಂಡಿತ್ತು. ಕಲ್ಯಾಣೋತ್ಸವ ಕಾರ್ಯಕ್ರಮದಲ್ಲಿ ಶ್ರೀ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿದ್ದು, ಪುರೋಹಿತರ



ನೇತೃತ್ವದಲ್ಲಿ ಶ್ರದ್ಧಾ-ಭಕ್ತಿಯಿಂದ ಪೂಜೆಗಳು ನೆರವೇರಿದವು. ಜಾರುಟ್ಲು ಪರಷೆ ಸಂದರ್ಭದಲ್ಲಿ ಭಕ್ತರು ಸಂಪ್ರದಾಯಬದ್ಧವಾಗಿ ಭಾಗವಹಿಸಿ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಿದರು. ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ನೂರಾರು ಭಕ್ತರು ಭಾಗವಹಿಸಿ ಪ್ರಸಾದ ಸ್ವೀಕರಿಸಿದರು. ಈ ಮಹೋತ್ಸವದಲ್ಲಿ ಬಿಜೆಪಿ ಮುಖಂಡರು ಹಾಗೂ ಸಮಾಜ ಸೇವಕರಾದ ಗುಂಜೂರು ಆರ್ ಶ್ರೀನಿವಾಸರೆಡ್ಡಿ ಭಾಗವಹಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, “ಪಾಳ್ಯಕೆರೆ ಗ್ರಾಮದ ಈ ದೇವಾಲಯವು ಭಕ್ತರ ಆಧ್ಯಾತ್ಮಿಕ ಕೇಂದ್ರವಾಗಿದ್ದು, ಇಂತಹ ವಾರ್ಷಿಕೋತ್ಸವಗಳು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ನಂಬಿಕೆಗಳನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಯುವ ಪೀಳಿಗೆ ಇಂತಹ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಅತ್ಯವಶ್ಯಕ” ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಮುಖಂಡರಾದ ನಾರಾಯಣರೆಡ್ಡಿ, ಸುಬ್ಬರೆಡ್ಡಿ, ಕುಂಟ್ಲಪಲ್ಲಿ ಮೂರ್ತಿ, ಬೈರೆಡ್ಡಿ, ಮಂಜು, ವೆಂಕಟರವಣಸ್ವಾಮಿ, ಮುರಳಿ, ಪಾಳ್ಯಕೆರೆ ಮೂರ್ತಿ, ಶ್ರೀನಿವಾಸರೆಡ್ಡಿ, ಮಧು, ಚೀಟಿಗಲಗುಟ್ಟ ಭೈರೆಡ್ಡಿ, ರಾಜು, ಅರ್ಚಕ ಲಕ್ಷ್ಮೀ ನರಸಿಂಹಾಚಾರ್ ಸೇರಿದಂತೆ ಮತ್ತಿತರರು ಹಾಜರಿದ್ದರು. ಗ್ರಾಮಸ್ಥರು ಹಾಗೂ ಭಕ್ತರು ಒಗ್ಗಟ್ಟಿನಿಂದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರುವುದು ವಿಶೇಷವಾಗಿತ್ತು.

ದೇವಾಲಯ ಸಮಿತಿ ಸದಸ್ಯರು, ಗ್ರಾಮ ಮುಖಂಡರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಒಟ್ಟಾರೆ, ಪಾಳ್ಯಕೆರೆ ಗ್ರಾಮದ ಶ್ರೀ ಲಕ್ಷ್ಮೀ ವೆಂಕಟರವಣಸ್ವಾಮಿ ದೇವಾಲಯದ ವಾರ್ಷಿಕೋತ್ಸವವು ಭಕ್ತಿ, ಸಂಪ್ರದಾಯ ಮತ್ತು ಸಾಮಾಜಿಕ ಏಕತೆಯ ಸಂದೇಶವನ್ನು ಸಾರಿದ ಮಹೋತ್ಸವವಾಗಿ ಗಮನಸೆಳೆಯಿತು.

## ಸಾಹಿತ್ಯ ಸಿಂಚನ

ಅಕ್ಷರ

ಅಕ್ಷರವೆ ಜ್ಞಾನದ ಮೊದಲ ಹೆಜ್ಜೆ,
ಅಕ್ಷರದಿಂದಲೇ ಬೆಳೆಯುತ್ತದೆ ಬುದ್ಧಿಯ ಬೆಳಗೆ.
ಅಮ್ಮನ ಮಾತಿನ ಮಧುರ ಧ್ವನಿ,
ಅಕ್ಷರಗಳಲ್ಲಿ ಮೂಡುತ್ತದೆ ಜೀವನ ರಹಸ್ಯ ಧನಿ.

ಅಕ್ಷರವೆ ಗುರುಗಳ ಅಮೂಲ್ಯ ದಾನ,
ಅಕ್ಷರವೇ ಜೀವನದ ನಿಜವಾದ ಮಾನ.
ಪುಸ್ತಕದ ಪುಟಗಳಲ್ಲಿ ಅರಳುವ ಹೂವು,
ಅಕ್ಷರಗಳಿಂದಲೇ ಜ್ಞಾನ ಸಾಗರವು.

ಅಕ್ಷರ ಬರೆಯುವ ಚಿಕ್ಕ ಕೈಗಳು,
ಭವಿಷ್ಯ ಕಟ್ಟುವ ದೊಡ್ಡ ಕನಸುಗಳು.
ಅಕ್ಷರ ತಿಳಿದವನು ಲೋಕ ಗೆಲ್ಲುವನು,
ಅಜ್ಞಾನ ಕತ್ತಲನ್ನು ದೂರ ಮಾಡುವನು.

ಅಕ್ಷರವೆ ಬೆಳಕು, ಅಕ್ಷರವೆ ಶಕ್ತಿ,
ಅಕ್ಷರದಿಂದ ಬೆಳೆಯುತ್ತದೆ ಮಾನವ ಭಕ್ತಿ.
ಕನ್ನಡದ ಅಕ್ಷರಗಳು ನಮ್ಮ ಹೆಮ್ಮೆ,
ಜೀವನ ಪೂರ್ತಿ ಉಳಿಯುವ ಅಮೂಲ್ಯ ಸಂಪತ್ತು
ನಮ್ಮದೆ.

ರಮೇಶ್ ಕೆ

# ಮಹಿಳೆ ಸಶಕ್ತವಾಗದೇ ಸದೃಢ ಸಮಾಜ ನಿರ್ಮಾಣ ಅಸಾಧ್ಯ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಸದೃಢ ಸಮಾಜ ನಿರ್ಮಾಣವಾಗಲು ಪುರುಷ ಮತ್ತು ಮಹಿಳೆಯರೂ ಸಮನಾಗಿರಬೇಕು. ಮಹಿಳೆ ಸಶಕ್ತವಾಗದೇ ಸದೃಢ ಸಮಾಜ ನಿರ್ಮಾಣವಾಗದು ಎಂದು ಎಸ್. ಕೆ. ಕಾಲೇಜಿನ ಉಪನ್ಯಾಸಕಿ ಅಶ್ವಿನಿ ಜೋಗೂರ ಹೇಳಿದರು. ಅವರು ಸ್ಥಳೀಯ ಕನ್ನಡ ಸಂಘದ ವತಿಯಿಂದ ಪಟ್ಟಣದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮತಾಯಿ ದೇವಸ್ಥಾನದಲ್ಲಿ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾನುವಾರ ಸಂಜೆ ಮಾತನಾಡಿದರು.**

ಮಹಿಳೆಯು ನಿರ್ಧಾರಗಳಲ್ಲಿ ಸ್ವಂತಿ-ಕೆಯುಳ್ಳವರಾಗಬೇಕು ಭದ್ರತೆ ಹೊಮದಬೇಕು ಗೌರವ ಮನ್ನಣೆ ಸಿಗಬೇಕು. ತನಗಾದ ಅನ್ಯಾಯದ ವಿರುದ್ಧ ಭಯವಿಲ್ಲದೇ ಧ್ವನಿಯೆತ್ತಬೇಕು. ನಾಲ್ಕು ಗೋಡೆಗಳ ಬಂಧನ ಕಳಚಿ ತನ್ನ ಕನಸುಗಳಿಗೆ ರೆಕ್ಕೆ ಕಟ್ಟಿ ಹಾರಾಡುವ ಸ್ಥಿತಿ ನಿರ್ಮಾಣವಾದಾಗ ಮಹಿಳೆ ಸಶಕ್ತಳು ಆದರೆ ಲಿಂಗ ತಾರತಮ್ಯ, ಅಸುರಕ್ಷತೆ ಭಾವನೆ ಇಂದಿಗೂ ತಪ್ಪಿಲ್ಲವೆಂದರು.



ಮುಖ್ಯ ಅತಿಥಿಗಳಾಗಿದ್ದ ಎಸ್.ಕೆ.ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಶೇಷಾಚಲ ಹವಾಲ್ದಾರ (ಚೇಚಿ) ಮಾತನಾಡಿ, ತಾಳಿಕೋಟೆ ನಿಂತಿ-ರುವುದೇ ಮಹಿಳೆಯ ತ್ಯಾಗದಿಂದ ಎನ್ನುವುದನ್ನು ಮರೆಯಬಾರದು. ಮಹಿಳೆಯರಿಗೆ ಅವಕಾಶಗಳನ್ನು ಒದಗಿಸಬೇಕು ಎಂದರು.

ಪರಿಶ್ರಮವಿಲ್ಲದೇ ಫಲ ದೊರೆಯದು ಪ್ರತಿ ಸಾಧನೆಯ ಹಿಂದೆ ಪರಿಶ್ರಮವಿದೆ ಎಂದರು. ಕನ್ನಡ ಸಂಘದ ಅಧ್ಯಕ್ಷ ಡಾ.ವಿ.ಎಸ್. ಕಾರ್ಚಿ ಮಾತನಾಡಿ, ಮೊಬೈಲ್ ಬಳಕೆ ನಮ್ಮನ್ನು ದಾರಿ ತಪ್ಪಿಸುತ್ತಿದ್ದು ಅದನ್ನು ಮಿತವಾಗಿ ಅವಶ್ಯಕತೆಯಿದ್ದಷ್ಟು ಮಾತ್ರ ಬಳಸುವಂತೆ ತಿಳಿಸಿದರು. ಸಾನ್ನಿಧ್ಯವನ್ನು ವಹಿಸಿದ್ದ ಆಧ್ಯಾತ್ಮಿಕ ಚಿಂತಕರಾದ ಶರಣೆ ಕಾಶಿಬಾಯಿ ನಾಗೂರಮಠ, ಶರಣೆ ಶಾಂತಮ್ಮ ತಾಯಿ ಕೋಳೂರ ಶಿವಶರಣೆ ಕಾಶಿಬಾಯಿ ಭಂಟನೂರ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಕನ್ನಡ ಸಂಘದ ಉಪಾಧ್ಯಕ್ಷೆ ಸುಮಂಗಲಾ ಕೋಳೂರ ವಹಿಸಿ ಮಾತನಾಡಿದರು. ಕನ್ನಡ ಸಂಘದ ಸಹ ಕಾರ್ಯದರ್ಶಿ ಸಾಹೇಬಗೌಡ ಬಿರಾದಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ರುದ್ರಮ್ಮ .ಬಿ.ದೇಸಾಯಿ ಸ್ವಾಗತಿಸಿದರು. ರತ್ನಾ ಹಂಗರಗಿ ಮತ್ತು



ಸುವರ್ಣಾ ಗದ್ದಗಿಮಠ ನಿರ್ವಹಿಸಿದರು. ಭುವನೇಶ್ವರಿ ಬಿರಾದಾರ ವಂದಿಸಿದರು.

ಸಾಧಕ ಮಹಿಳೆಯರಾದ ಖ್ಯಾತ ಮಹಿಳಾ ವೈದ್ಯೆ ಡಾ. ಸರೋಜಿನಿ ವಿ.ಕಾರ್ಚಿ, ಕದಳಿ ವೇದಿಕೆಯ ಅಧ್ಯಕ್ಷೆ ಉಮಾ ಫಿವಾರಿ, ಯೋಗ ಸಾಧಕಿ ಸುರೇಖಾ ಸಾಲಂಕಿ,ಸ್ಥಳೀಯ ಅರ್ಬನ್ ಬ್ಯಾಂಕ್ ವ್ಯವಸ್ಥಾಪಕಿ ಬಸಮ್ಮ ಮಣೂರ, ಕೆಪಿ-ಎಸ್ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕಿ ಅನಿತಾ ಸಜ್ಜನ, ಸಾಹಿತಿ, ಶಿಕ್ಷಕಿ ಮಡಿವಾಳಮ್ಮ ನಾಡಗೌಡ ಅವರುಗಳನ್ನು ಗೌರವಿಸಲಾಯಿತು.

ಕನ್ನಡ ಸಂಘದ ಪದಾಧಿಕಾರಿಗಳು, ಇತರ ಗಣ್ಯರು, ಮಹಿಳೆಯರು ಭಾಗವಹಿಸಿದ್ದರು.

# ತೆರಿಗೆ ವಂಚಕರ ಆಸ್ತಿ GBA ವಶಕ್ಕೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ದಕ್ಷಿಣ ನಗರ ಪಾಲಿಕೆ ಹಾಗೂ ಪೂರ್ವ ನಗರ ಪಾಲಿಕೆಗಳು ಆಸ್ತಿ ತೆರಿಗೆ ಪಾವತಿಸುವಲ್ಲಿ ವಿಫಲರಾಗಿರುವ ಸುಸ್ತಿದಾರರ ಸ್ವತ್ತುಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳಲು ಮುಂದಾಗಿವೆ. ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯ ಪ್ರಕಾರ, ಪ್ರತಿಯೊಬ್ಬ ಸ್ವತ್ತು ಮಾಲೀಕರೂ ಪ್ರತಿ ವರ್ಷ ಆಸ್ತಿ ತೆರಿಗೆ ಪಾವತಿಸುವುದು ಕಡ್ಡಾಯ.**




ಆದರೆ, ಹಲವು ಬಾರಿ ನೋಟಿಸ್, ಬೇಡಿಕೆ ಪತ್ರಗಳು ಹಾಗೂ ಮೊಬೈಲ್ ಸಂದೇಶಗಳ ಮೂಲಕ ಸೂಚನೆ ನೀಡಿದರೂ ಕೆಲವು ಮಾಲೀಕರು ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದಾರೆ.ಇದರಿಂದಾಗಿ, ದಕ್ಷಿಣ ಪಾಲಿಕೆ ವ್ಯಾಪ್ತಿಯಲ್ಲಿ ಗುರುತಿಸಲಾದ ಕೆಲವು ಸ್ವತ್ತುಗಳನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿತ್ತು. ಆದ-'ರೆ ಹರಾಜಿನಲ್ಲಿ ಬಿಡ್ಡುದಾರರು ಭಾಗವಹಿಸದ ಹಿನ್ನೆಲೆಯಲ್ಲಿ ಈಗ ಪಾಲಿಕೆಯೇ ಆ ಸ್ವತ್ತುಗಳನ್ನು ಖರೀದಿಸಿ ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳಲು ಮುಂದಾಗಿವೆ. ಮೊದಲ ಹಂತದಲ್ಲಿ ಬೊಮ್ಮನಹಳ್ಳಿ ವಲಯದ 22 ಹಾಗೂ ಜಯನಗರ ವಲಯದ 30 ಸ್ವತ್ತುಗಳನ್ನು ಪಾಲಿಕೆ ವಶಕ್ಕೆ ಪಡೆಯುವ ಪ್ರಕ್ರಿಯೆ ಆರಂಭವಾಗಿದೆ. ಪಾಲಿಕೆ ತನ್ನ ನಿಧಿಯಿಂದ ಮೊತ್ತ ಪಾವತಿಸಿ, ಬಾಕಿ ತೆರಿಗೆ ಕಡಿತಗೊಳಿಸಿದ ನಂತರ ಉಳಿದ ಹಣವನ್ನು ಮೂಲ ಮಾಲೀಕರ ಖಾತೆಗೆ ಜಮಾ ಮಾಡಲಿದೆ. ಇದೇವೇಳೆ, ಬೆಂಗಳೂರು ಪೂರ್ವ ನಗರ ಪಾಲಿಕೆಯಲ್ಲೂ 51 ಆಸ್ತಿ ತೆರಿಗೆ ಬಾಕಿದಾರರ ಸ್ವತ್ತುಗಳನ್ನು ಪಾಲಿಕೆ ಸುಪರ್ದಿಗೆ ಪಡೆಯಲು ತೀರ್ಮಾನಿಸಲಾಗಿದೆ. ಮಹದೇವಪುರ ಮತ್ತು ಕೆ.ಆರ್.ಪುರ ವಲಯಗಳಲ್ಲಿ ಈ ಕ್ರಮ ಜಾರಿಯಾಗಲಿದೆ.ಆದ-'ರೆ, ಸ್ವತ್ತು ಮಾಲೀಕರಿಗೆ ಇನ್ನೊಂದು ಅವಕಾಶ ನೀಡಲಾಗಿದೆ. ಒಂದು ತಿಂಗಳೊಳಗೆ ಬಾಕಿ ತೆರಿಗೆ ಪಾವತಿಸಿದರೆ, ಸ್ವತ್ತುಗಳನ್ನು ವಶಪಡಿಸಿಕೊಳ್ಳುವ ಕ್ರಮದಿಂದ ವಿನಾಯಿತಿ ದೊರೆಯಲಿದೆ.ನಗರ ಪಾಲಿಕೆಗಳು ಸ್ಪಷ್ಟಪಡಿಸಿರುವಂತೆ, ಆಸ್ತಿ ತೆರಿಗೆ ನಗರ ಅಭಿವೃದ್ಧಿಗೆ ಪ್ರಮುಖ ಆದಾಯ ಮೂಲವಾಗಿದ್ದು, ನಾಗರಿಕರು ಸಮಯಕ್ಕೆ ಸರಿಯಾಗಿ ತೆರಿಗೆ ಪಾವತಿಸುವುದು ಅಗತ್ಯವಾಗಿದೆ. ತೆರಿಗೆ ಬಾಕಿದಾರರಿಗೆ ಇದು ಅಂತಿಮ ಎಚ್ಚರಿಕೆ ಎಂದು ನಗರಪಾಲಿಕೆ ಎಚ್ಚರಿಕೆ ನೀಡಿದೆ.

# ಬಾಗಲಕೋಟೆ ಉಪಚುನಾವಣೆ: ಉಮೇಶ ಹುಲ್ಲಪ್ಪ ಮೇಟಿ ಪರ ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಅವರಿಂದ ಬಿರುಸಿನ ಪ್ರಚಾರ





ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯ ಕಣ ದಿನದಿಂದ ದಿನಕ್ಕೆ ರಂಗೇರುತ್ತಿದ್ದು, ಕಾಂಗ್ರೆಸ್ ಪಕ್ಷದ ಶಕ್ತಿಶಾಲಿ ಅಭ್ಯರ್ಥಿ ಶ್ರೀ ಉಮೇಶ ಹುಲ್ಲಪ್ಪ ಮೇಟಿ ಅವರ ಪರವಾಗಿ ಭರ್ಜರಿ ಪ್ರಚಾರ ಕಾರ್ಯ ಸಾಗುತ್ತಿದೆ.**

ಈ ನಿಟ್ಟಿನಲ್ಲಿ ಸಿಂಧನೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ ಅವರು ಕ್ಷೇತ್ರಕ್ಕೆ ಭೇಟಿ ನೀಡಿ ಮತದಾರರಲ್ಲಿ ಹೊಸ ಉತ್ಸಾಹ ತುಂಬಿದರು. ಶಾಸಕ ಹಂಪನಗೌಡ ಬಾದರ್ಲಿ ಅವರು ಪ್ರಮುಖ ನಾಯಕರಾದ ಎ. ವಸಂತ ಕುಮಾರ ಅವರೊಂದಿಗೆ ಸೇರಿ ಸೋಮವಾರ ಸುತಗುಂಡಾರ ಹಾಗೂ ನಾಯನೇಗಲಿ ಗ್ರಾಮಗಳಲ್ಲಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಗಳಲ್ಲಿ ಭಾಗವಹಿಸಿ ಅಭ್ಯರ್ಥಿ ಪರ ಮತಯಾಚನೆ ಮಾಡಿದರು. ರಾಜ್ಯ ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳು ಹಾಗೂ ಗ್ಯಾರಂಟಿ ಯೋಜನೆಗಳ ಲಾಭ ಪ್ರತಿಯೊಬ್ಬರಿಗೂ ತಲುಪುತ್ತಿದೆ.

ಈ ಅಭಿವೃದ್ಧಿ ಮುಂದುವರಿಯಲು ಉಮೇಶ ಮೇಟಿ ಅವರ ಗೆಲುವು ಅನಿವಾರ್ಯ ಎಂದು ಶಾಸಕರು ಪ್ರತಿಪಾದಿಸಿದರು. ಪ್ರಚಾರದ ವೇಳೆ ಹೋದ ಕಡೆಯಲ್ಲೆಲ್ಲಾ ಜನರಿಂದ ಅಭೂತಪೂರ್ವ ಸ್ವಾಗತ ವ್ಯಕ್ತವಾಗುತ್ತಿದ್ದು, ಕಾಂಗ್ರೆಸ್ ಗೆಲುವಿನ ಮುನ್ಸೂಚನೆ ನೀಡುತ್ತಿದೆ.ಸುತಗುಂಡಾರ ಮತ್ತು ನಾಯನೇಗಲಿ ಗ್ರಾಮಗಳಲ್ಲಿ ನಡೆದ ಸಭೆಯಲ್ಲಿ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡು ಶಕ್ತಿ ಪ್ರದರ್ಶನ ಮಾಡಿದರು. ಈ ಸಭೆಯಲ್ಲಿ ಶಾಸಕ ಹಂಪನಗೌಡ ಬಾದರ್ಲಿ ಮಾತನಾಡಿ ಉಮೇಶ ಹುಲ್ಲಪ್ಪ ಮೇಟಿ ಅವರು ಈ ಭಾಗದ ಮಣ್ಣಿನ ಮಗ.

ಸಾಮಾನ್ಯ ಜನರ ಕಷ್ಟಗಳಿಗೆ ಸ್ಪಂದಿಸುವ ಗುಣ ಹೊಂದಿರುವ ಅವರಿಗೆ ಬಾಗಲಕೋಟೆಯ ಜನತೆ ಹೆಚ್ಚಿನ ಮತಗಳ ಅಂತರದಿಂದ ಜಯಶಾಲಿಯಾಗಿಸುವುದು ಖಚಿತ. ಕಾಂಗ್ರೆಸ್ ಪಕ್ಷದ ಮೇಲೆ ಜನರಿಟ್ಟಿರುವ ವಿಶ್ವಾಸ ಈ ಉಪಚುನಾವಣೆಯ ಫಲಿತಾಂಶದಲ್ಲಿ ಪ್ರತಿಫಲಿಸಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು, ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ನೂರಾರು ಬೆಂಬಲಿಗರು ಉಪಸ್ಥಿತರಿದ್ದು, ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸಿದರು.

# ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಭರ್ಜರಿ ಜಯ: ಯತೀಂದ್ರ ಸಿದ್ದರಾಮಯ್ಯ ವಿಶ್ವಾಸ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ರಾಜ್ಯದಲ್ಲಿ ನಡೆಯಲಿರುವ ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವ ಣೆಗಳಲ್ಲಿ ಕಾಂಗ್ರೆಸ್ ಪಕ್ಷ ಭರ್ಜರಿ ಜಯ ಸಾಧಿಸಲಿದೆ ಎಂದು ಶಾಸಕ ಯತೀಂದ್ರ ವಿಶ್ವಾಸ ವ್ಯಕ್ತಪಡಿಸಿದರು.**

ಅವರಿಂದು ಪಟ್ಟಣದ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಹಾಗೂ ಜನಪರ ಯೋಜನೆಗಳಿಗೆ ಸಾರ್ವಜನಿಕ-ರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಇದೇ ಹಿನ್ನೆಲೆ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಸ್ಪಷ್ಟ ಬಹುಮತದೊಂದಿಗೆ ಗೆಲುವು ಸಾಧಿಸಲಿದ್ದಾರೆ ಎಂದು ಹೇಳಿದರು. ದಾವಣಗೆರೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಬಲಿಷ್ಠ ಸಂಘಟನೆ ರೂಪುಗೊಂ ಡಿದ್ದು, ಪಕ್ಷದ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ ಅವರ ಬೆಂಬಲದೊಂದಿಗೆ ಸಮರ್ಥವಾಗಿ ಚುನಾವಣೆಯನ್ನು ಎದು-ರಿಸಲಾಗುತ್ತಿದೆ ಎಂದು ತಿಳಿಸಿದರು.



ಬಾಗಲಕೋಟೆ ಕ್ಷೇತ್ರದಲ್ಲೂ ಉಮೇಶ್ ಮೇಟಿ ಅವರ ಕುಟುಂಬದ ಸದಸ್ಯರು ಸೇರಿದಂತೆ ಪಕ್ಷದ ಕಾರ್ಯಕರ್ತರು ಒಗ್ಗಟ್ಟಿನಿಂದ ಕಾರ್ಯನಿರ್ವ ಹಿಸುತ್ತಿದ್ದು, ಈ ಏಕತೆ ಕಾಂಗ್ರೆಸ್ ಗೆಲುವಿಗೆ ಸಹಾಯಕವಾಗಲಿದೆ ಎಂದು ಹೇಳಿದರು. ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಭಿನ್ನಮತಗಳಿಲ್ಲ. ಎಲ್ಲ ನಾಯಕರು ಹಾಗೂ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದ ಜನರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಅಪಾರ ಪ್ರೀತಿ ಮತ್ತು ವಿಶ್ವಾಸ ಹೊಂದಿದ್ದಾರೆ ಎಂದು ಯತೀಂದ್ರ ಹೇಳಿದರು. ಸ್ಥಳೀಯ ಸಮಸ್ಯೆಗಳ ಕುರಿತು ಪ್ರತಿಕ್ರಿಯಿಸಿದ ಅವರು, ಮುದಗಲ್ ಪ್ರದೇಶದ ಅಭಿವೃದ್ಧಿ ಹಾಗೂ ತಾಯಿ-ಮಕ್ಕಳ ಆಸ್ಪತ್ರೆಯ ಸಮಸ್ಯೆಗಳ ಕುರಿತು ಮುಖ್ಯಮಂತ್ರಿ ಜೊತೆ ಚರ್ಚಿಸಿ ಶೀಘ್ರ ಪರಿಹಾರ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಉಪಾಧ್ಯಕ್ಷ ಹಾಗೂ ಮಾಜಿ ಶಾಸಕ ಡಿ. ಎಸ್. ಹೂಲಗೇರಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ, ಮುದಗಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರಗೌಡ, ಮುದಕಪ್ಪ (ವಕೀಲರು), ಮಹಮ್ಮದ್ ರಫಿ, ಉಮೇಶ್ ಹುನಕುಂಟಿ, ಖಾಜಾಹುಸೇನ್ ಪೂಲವಾಲೆ, ಬಾಬಾಖಾಜಿ, ಸಂಗಮೇಶ, ಗದ್ದೆನಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.






# ನೇಮಕಾತಿ ಪ್ರಕಟಣೆ

ತುಮಕೂರು ಮಹಾನಗರ ಪಾಲಿಕೆ ನೇಮಕಾತಿ 2026–238 ಪೌರಕಾರ್ಮಿಕ (ನಾಗರಿಕ ಸೇವಕ) ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮಾರ್ಚ್ 25, 2026 ತುಮಕೂರು ಮಹಾನಗರ ಪಾಲಿಕೆ ನೇಮಕಾತಿ 2026: 238 ಪೌರಕಾರ್ಮಿಕ (ನಾಗರಿಕ ಸೇವಕ) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ತುಮಕೂರು ಮಹಾನಗರ ಪಾಲಿಕೆ ಮಾರ್ಚ್ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಪೌರಕಾರ್ಮಿಕ (ನಾಗರಿಕ ಸೇವಕ) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ತುಮಕೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 08–ಏಪ್ರಿಲ್–2026 ರಂದು ಅಥ–ವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 25–03–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08–ಏಪ್ರಿಲ್–2026 ಸಲ್ಲಿಸಲು ಕೊನೆಯ ದಿನಾಂಕ ಅಧಿಕೃತ ವೆಬ್‌ಸೈಟ್: tumakurududc.mrc.gov.in

# ಶೆಲ್ ಪೆಟ್ರೋಲ್ ಬಂಕ್‌ಗಳಲ್ಲಿ ಮತ್ತೆ ತೈಲ ದರ ಏರಿಕೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಒಂದು ಕಡೆ ಮಧ್ಯಪ್ರಾಚ್ಯದಲ್ಲಿ ಅಮೇರಿಕಾ–ಇಸ್ರೇಲ್–ಇರಾನ್ ನಡುವೆ ಭೀಕರ ಯುದ್ಧ ನಡೆಯುತ್ತಿರುವ ಕಾರಣ, ದೇಶದೆಲ್ಲೆಡೆ ಎಲ್‌ಪಿಜಿ ಮತ್ತು ತೈಲ ಬಿಕ್ಕಟ್ಟು ಕೊರತೆ ಉಂಟಾಗಿರುವ ಬೆನ್ನಲ್ಲೇ, ಖಾಸಗಿ ಪೆಟ್ರೋಲ್ ಕಂಪನಿ ಶೆಲ್ ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಮತ್ತೆ ಪರಿಷ್ಕರಣೆ ಮಾಡುವ ಮೂಲಕ ಸವಾರರ ಜೇಬಿಗೆ ಕತ್ತರಿ ಹಾಕಿದೆ.**



ಪೆಟ್ರೋಲ್– ಡೀಸೆಲ್– ಬೆಲೆಯನ್ನು ಶೆಲ್ ಕಂಪನಿ ಕಳೆದ 15 ದಿನಗಳಲ್ಲಿ ಮೂರನೇ ಬಾರಿಗೆ ಹೆಚ್ಚಳ ಮಾಡಿದೆ. ಸಾಮಾನ್ಯ ಪೆಟ್ರೋಲ್ ಮತ್ತು ಡೀಸೆಲ್ ಜೊತೆಗೆ ಪ್ರಿಮಿಯಂ ಇಂಧನದ ದರಗಳೂ ಹೆಚ್ಚಾಗಿವೆ. ಇದು ವಾಹನ ಸವಾರರಿಗೆ ದೊಡ್ಡ ಆಘಾತ ನೀಡಿದೆ. 106 ರೂ. ಇದ್ದ ಪೆಟ್ರೋಲ್ ದರವನ್ನು 108.50 ರೂಪಾಯಿಗೆ ಏರಿಕೆ ಮಾಡಲಾಗಿತ್ತು. ಇದೀಗ 6 ರೂಪಾಯಿ ಹೆಚ್ಚಿಸಿದ್ದು, ಸಾಮಾನ್ಯ ಪೆಟ್ರೋಲ್ ದರ 112 ರೂ.ಗೆ ಹೆಚ್ಚಳವಾಗಿದ್ದರೆ, ಪ್ರಿಮಿಯಂ ಪೆಟ್ರೋಲ್ ದರ ಪ್ರತಿ ಲೀಟರ್‌ಗೆ 122.42 ರೂಪಾಯಿ ತಲುಪಿದೆ. ಇನ್ನೂ ಸಾಮಾನ್ಯ ಡೀಸೆಲ್ ಬೆಲೆ ಕಳೆದ ವಾರ 91 ರೂ. ನಿಂದ 93.50 ರೂ.ಗಳಿಗೆ ಏರಿಕೆಯಾಗಿತ್ತು. ಇದೀಗ ಲೀಟರ್ ಡಿಸೇಲ್ 98 ರೂಪಾಯಿಗೆ ಹೆಚ್ಚಳವಾಗಿದ್ದು, ಪ್ರಿಮಿಯಂ ಡೀಸೆಲ್ ಪ್ರತಿ ಲೀ.ಗೆ 108.50 ರೂ. ತಲುಪಿದೆ. ಏಕೆ ಈ ಏರಿಕೆ? : ಇರಾನ್–ಅಮೆರಿಕಾ–ಇಸ್ರೇಲ್ ನಡುವಿನ ಯುದ್ಧದಿಂದಾಗಿ ಜಗತ್ತಿನಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗಿದೆ. ಹಾರ್ಮುಜ್ ಜಲಸಂಧಿಯಲ್ಲಿ ಇಂಧನ ಸಾಗಣೆಗೆ ಅಡಚಣೆ ಉಂಟಾಗಿರುವುದು ಇದಕ್ಕೆ ಮುಖ್ಯ ಕಾರಣ. ಖಾಸಗಿ ಕಂಪನಿಗಳು ಈ ವೆಚ್ಚವನ್ನು ಗ್ರಾಹಕರ ಮೇಲೆ ಹೊರಿಸುತ್ತಿವೆ. ಸರ್ಕಾರಿ ಕಂಪನಿಗಳಲ್ಲಿ ಇನ್ನೂ ದರ ಯಥಾಸ್ಥಿತಿಯಲ್ಲಿದೆಯಾದರೂ, ಶೆಲ್‌ನಂತಹ ಖಾಸಗಿ ಬಂಕ್‌ಗಳಲ್ಲಿ ದರ ಏರಿಕೆಯಾಗುತ್ತಿದೆ.ಈ ಏರಿಕೆಯಿಂದ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದೆ. ದಿನನಿತ್ಯ ಕೆಲಸಕ್ಕೆ ಬೈಕ್ ಅಥವಾ ಕಾರು ಬಳಸುವವರಿಗೆ ಹೆಚ್ಚುವರಿ ಖರ್ಚು ಬರುತ್ತಿದೆ. ಉದಾಹರಣೆಗೆ, ಒಂದು ಬೈಕ್‌ನಲ್ಲಿ 10 ಲೀಟರ್ ಪೆಟ್ರೋಲ್ ತುಂಬಿಸಿದರೆ ಹಿಂದಿನಿಂತ 60 ರೂಪಾಯಿ ಹೆಚ್ಚು ಖರ್ಚಾಗುತ್ತಿದೆ. ನಾಲ್ಕು ಚಕ್ರದ ವಾಹನಗಳಲ್ಲಿ ಇದು ಇನ್ನೂ ಹೆಚ್ಚು. ಸರಕು ಸಾಗಣೆ ವೆಚ್ಚ ಹೆಚ್ಚಾದರೆ ತರಕಾರಿ, ಹಾಲು, ಹಣ್ಣು ಮುಂತಾದ ದೈನಂದಿನ ವಸ್ತುಗಳ ಬೆಲೆಯೂ ಏರಿಕೆಯಾಗುವ ಸಾಧ್ಯತೆ ಇದೆ. ಇದು ಸಾಮಾನ್ಯ ಜನರ ಜೀವನ ವೆಚ್ಚವನ್ನು ಇನ್ನಷ್ಟು ಹೆಚ್ಚಿಸುವ ಸಾಧ್ಯತೆಯಿದೆ. ಶೆಲ್ ಕಂಪನಿ ಮೊದಲು ದರ ಏರಿಸಿತ್ತು. ಈಗ ಮತ್ತೆ ಏರಿಕೆ ಮಾಡಿದೆ. ಇದು ಖಾಸಗಿ ಕಂಪನಿಗಳು ತಮ ಲಾಭ–ನಷ್ಟ ಲೆಕ್ಕ ಹಾಕಿ ದರ ನಿಗದಿಪಡಿಸುತ್ತಿರುವುದನ್ನು ತೋರಿಸುತ್ತಿದೆ. ಸರ್ಕಾರಿ ಕಂಪನಿಗಳಲ್ಲಿ ಇನ್ನೂ ದರ ಸ್ಥಿರವಾಗಿದೆ. ಬೆಂಗಳೂರಿನಂತಹ ದೊಡ್ಡ ನಗರದಲ್ಲಿ ದಿನನಿತ್ಯ ಲಕ್ಷಾಂತರ ಜನರು ಪೆಟ್ರೋಲ್ ಮತ್ತು ಡೀಸೆಲ್ ಬಳಸುತ್ತಾರೆ. ಈ ಏರಿಕೆಯು ಅವರ ದೈನಂದಿನ ಖರ್ಚನ್ನು ಹೆಚ್ಚಿಸುತ್ತಿದೆ. ಆದ್ದರಿಂದ ಗ್ರಾಹಕರು ದರಗಳನ್ನು ಗಮನಿಸಿ, ಸರ್ಕಾರಿ ಬಂಕ್‌ಗಳಿಗೆ ಆದ್ಯತೆ ನೀಡುವುದು ಉತ್ತಮ. ಒಟ್ಟಾರೆಯಾಗಿ, ಶೆಲ್ ಬಂಕ್‌ಗಳಲ್ಲಿ ಕಳೆದ 15 ದಿನಗಳಲ್ಲಿ ಮೂರನೇ ಬಾರಿ ಏರಿಕೆಯಾಗಿರುವುದು ವಾಹನ ಸವಾರರಿಗೆ ದೊಡ್ಡ ತಲೆನೋವಾಗಿದೆ. ಇಂಧನ ಬೆಲೆಗಳು ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂಬ ಮಾತುಗಳೂ ಕೇಳಿಬರುತ್ತಿವೆ.

## ಜಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆ

# ಪಕ್ಷಾತೀತ ಪ್ರಗತಿಪರ ರೈತರ ಒಕ್ಕೂಟಕ್ಕೆ ಭರ್ಜರಿ ಜಯ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಗ್ರಾಮದಲ್ಲಿ ದಿನಾಂಕ 29.03.2026 ರಂದು (ರವಿವಾರ) ನಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಪಕ್ಷಾತೀತ ಪ್ರಗತಿಪರ ರೈತರ ಒಕ್ಕೂಟ ಭರ್ಜರಿ ಜಯ ಸಾಧಿಸಿದೆ. ಒಟ್ಟು 12 ಸ್ಥಾನಗಳಿಗೆ ನಡೆದ ಈ ಚುನಾವಣೆಯಲ್ಲಿ ಬೆಳಿಗ್ಗೆ 9:00 ಗಂಟೆಯಿಂದ ಸಂಜೆ 4:00 ಗಂಟೆಯವರೆಗೆ ಬಿರುಸಿನ ಮತದಾನ ನಡೆಯಿತು. ಬಳಿಕ ಸಂಜೆ 4:30ಕ್ಕೆ ಮತ ಎಣಿಕೆ ಪ್ರಕ್ರಿಯೆ ಆರಂಭವಾಗಿ, ರಾತ್ರಿ 8:30ಕ್ಕೆ ಬಹುತೇಕ ಎಲ್ಲಾ ಫಲಿತಾಂಶಗಳು ಪ್ರಕಟವಾಗಿವೆ.**

ಈ ಚುನಾವಣೆಯಲ್ಲಿ ಪಕ್ಷಾತೀತ ಪ್ರಗತಿಪರ ರೈತರ ಒಕ್ಕೂಟವು 10 ಸ್ಥಾನಗಳನ್ನು ಗೆದ್ದು ಸ್ಪಷ್ಟ ಬಹುಮತ ಸಾಧಿಸಿದೆ. ಗೆಲುವು ಸಾಧಿಸಿದ ಅಭ್ಯರ್ಥಿಗಳು ಸಾಲಗಾರರ ಕ್ಷೇತ್ರ:

1. ಖುರಸಿದ್ ಪಟೇಲ್–ಸಾಮಾನ್ಯ ಕ್ಷೇತ್ರ
2. ಶಿವಬಸಪ್ಪ ರಾಮ್ ಪಾಳಿ–ಸಾಮಾನ್ಯ ಕ್ಷೇತ್ರ
3. ಶಿವರಾಜ್ ವಿಭೂತಿ–ಸಾಮಾನ್ಯ ಕ್ಷೇತ್ರ
4. ಗಿರೀಶ್ ಮಾಲಿ ಪಾಟೀಲ್–ಸಾಮಾನ್ಯ ಕ್ಷೇತ್ರ
5. ನವೀನ್ ಪಾಟೀಲ್–ಸಾಮಾನ್ಯ ಕ್ಷೇತ್ರ





6. ಈಶಣ್ಣ ಕಾಟಮಳ್ಳಿ–ಪರಿಶಿಷ್ಟ ಜಾತಿ ಕ್ಷೇತ್ರ
7. ಗೋವಿಂದಪ್ಪಹಲಗೇರಿ–ಪರಿಶಿಷ್ಟಪಂಗಡ ಕ್ಷೇತ್ರ
8. ವೆಂಕೂಬ ಪೂಜಾರಿ–ಹಿಂದುಳಿದ ವರ್ಗ ಕ್ಷೇತ್ರ
9. ಅಮರೆಗೌಡ ಪೊಲೀಸ್ ಪಾಟೀಲ್
? ಹಿಂದುಳಿದ ವರ್ಗ (ಬಿ) ಕ್ಷೇತ್ರ
10. ಶ್ರೀಮತಿ ಶಾಂತಮ್ಮ ಜಂಬಲದಿನ್ನಿ–ಮಹಿಳಾ ಕ್ಷೇತ್ರ
11. ಶ್ರೀಮತಿ ಸರಸ್ವತಿ ನಾಡಗೌಡ–ಮಹಿಳಾ ಕ್ಷೇತ್ರ

ಸಾಲಗಾರರಲ್ಲದ ಕ್ಷೇತ್ರ: 12) ವೆಂಕೋಬ ಯರಕಮಟ್ಟಿ–ಸಾಮಾನ್ಯ ಕ್ಷೇತ್ರ

ಚುನಾವಣೆ ಅಧಿಕಾರಿಯಾಗಿರುವ ಅಂಬ–ರೀಶ್ ಹಾಗೂ ಸಿಬ್ಬಂದಿ ವರ್ಗದವರು ಮತದಾನಕ್ಕೆ ಹಾಗೂ ಮತ ಎಣಿಕೆಗೆ ಸೂಕ್ತ ವ್ಯವಸ್ಥೆ ಮಾಡಿ ಯಶಸ್ವಿಯಾಗಿ ಚುನಾವಣೆ ಪ್ರಕ್ರಿಯೆ ಮುಗಿಸಿದರು, ಜಾಲಹಳ್ಳಿ ಪಿಎಸ್‌ಐ ಆಗಿರುವ ವೈಶಾಲಿ ಜಳಕಿಯವರು ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಿ ಚುನಾವಣೆಯನ್ನ ಯಶಸ್ವಿ ಪೂರೈಸಿದರು.

ಪ್ರತಿಕ್ರಿಯೆ ವಿಜಯೋತ್ಸವ ಸಂದರ್ಭದಲ್ಲಿ ಒಕ್ಕೂಟದ ಮುಖಂಡರಾದ ವೀರಣ್ಣ ಬಳೆ ಸಾಹುಕಾರ್ ಮಾತನಾಡಿ, "ರೈತರ ಹಿತದೃಷ್ಟಿಯಿಂದ ಪಕ್ಷಾತೀತವಾಗಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇವೆ. ರೈತ ಬಾಂಧವರ ಅಪಾರ ಬೆಂಬಲದಿಂದ 10 ಸ್ಥಾನಗಳನ್ನು ಗೆದ್ದಿದ್ದೇವೆ. ಸಂಪೂರ್ಣ ಬಹುಮತ ನೀಡಿದ ಜಾಲಹಳ್ಳಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ರೈತರಿಗೆ ಹೃತ್ಪೂರ್ವಕ ಧನ್ಯವಾದಗಳು," ಎಂದು ಹೇಳಿದರು. ಅವರು ಮುಂದುವರೆದು, "ಸಹಕಾರ ಸಂಘವನ್ನು ಇನ್ನಷ್ಟು ಅಭಿವೃದ್ಧಿಪಡಿಸಿ ರೈತ–ರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದೇ ನಮ್ಮ ಮುಖ್ಯ ಗುರಿ," ಎಂದು ತಿಳಿಸಿದ್ದಾರೆ.

ಉಪಸ್ಥಿತಿ ಈ ವಿಜಯೋತ್ಸವದಲ್ಲಿ ವೀರಣ್ಣ ಬಳೆ ಸಾಹುಕಾರ್, ಅಮರೇಶ್ ಪಾಟೀಲ್, ಶಿವು ಪಾಣಿ ಸಾಹುಕಾರ್, ರಾಮನಗೌಡ ಕರಡಿಗುಡ್ಡ ಮುರಳಿಧರ್ ಬಾಗುರು,ಡಾಕ್ಟರ್ ವೀರನಗೌಡ ಹೇರುಂಡಿ, ಕಾಂತಯ್ಯ ಸ್ವಾಮಿ ಏರುಂಡಿ, ಭೀಮಣ್ಣ ನಾಡಗೌಡ ಚಿಂಚೋಡಿ ಅಯ್ಯಣ್ಣ ಬಂಕಲ್ ದೊಡ್ಡಿ, ಶಂಕರ್ ಗೌಡ ಮಾಲಿ ಪಾಟೀಲ್, ರಂಗಣ್ಣ ಮಾಸ್ಟರ್ ಬಂಕಲ್ ದೊಡ್ಡಿ ಕರಿಯಪ್ಪ ಮುಂಕಲದೊಡ್ಡಿ, ಚೆನ್ನಮ್ಮಮಠ ತಾತ, ರಂಗನಾಥ ಮಾಕಾಶಿ, ಚಂದಪ್ಪ ಬುದ್ದಿನ್ನಿ, ಗೌಡಪ್ಪ ವಡ್ಡರ್, ರಮೇಶ್ ಆನ್ವರಿ, ಗಂಗಪ್ಪ ತಗ್ಗಳ್ಳಿ, ಆನಂದ್ ಪಾಟೀಲ್ ಮದುರಂಗಪ್ಪ ವಟರ್, ಅಮರಣ್ಣ ಲಿಂಗದಳ್ಳಿ ಮಾಳಪ್ಪ ಪೂಜಾರಿ ಸೇರಿದಂತೆ ಹಲವರು ಭಾಗವಹಿಸಿದ್ದರು. ಗ್ರಾಮ ಪಂಚಾಯತ್ ಉಪಾಧ್ಯಕ್ಷ ವೀರೇಶ ಅರಕೇರಿ ಹಾಗೂ ಸದಸ್ಯರಾದ ಸಲಭಣ್ಣ ಹಂಪರಗುಂದಿ ಮತ್ತು ಅಬ್ದುಲ್ ರಹಮಾನ್ ಉಪಸ್ಥಿತರಿದ್ದರು.

# ಕೇರಳ ವಿಧಾನಸಭಾ ಚುನಾವಣೆ: ಕಾಂಗ್ರೆಸ್ ಅಭ್ಯರ್ಥಿಗಳ ಪರ ಸಚಿವ ಎನ್.ಎಸ್. ಬೋಸರಾಜು ಭರ್ಜರಿ ಪ್ರಚಾರ





ನೈಜ್ಯ ದೆಸೆ ನ್ಯೂಸ್

**ಕಣ್ಣೂರು/ತಿಕ್ಕರಿಪುರ: ಕೇರಳ ವಿಧಾನಸಭಾ ಚುನಾವಣಾ ಕಣ ದಿನದಿಂದ ದಿನಕ್ಕೆ ರಂಗೇರುತ್ತಿದ್ದು, ಕರ್ನಾಟಕ ಸರ್ಕಾರದ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್. ಎಸ್. ಬೋಸರಾಜು ಅವರು ಸೋಮವಾರ ಕೇರಳದ ಕಣ್ಣೂರು ಮತ್ತು ತಿಕ್ಕರಿಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಭರ್ಜರಿ ಪ್ರಚಾರ ನಡೆಸಿದರು.**

ಕಣ್ಣೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಟಿ.ಓ. ಮೋಹನ್ ಅವರ ಪರವಾಗಿ ಮತಯಾಚಿಸಿದ ಸಚಿವರು, ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಮಾತನಾಡಿದರು. "ಭಾರತದ ಆರ್ಥಿಕ ಭದ್ರತೆ ಮತ್ತು ಸಾಮಾಜಿ–ಕ ನ್ಯಾಯದ ರಕ್ಷಣೆಯಲ್ಲಿ ಕಾಂಗ್ರೆಸ್ ಪಕ್ಷದ ಪಾತ್ರ ಅನನ್ಯ. ದೇಶದ ಮೂಲಸೌಕರ್ಯದಿಂದ ಹಿಡಿದು ಸಾಮಾನ್ಯ ಜನರ ಬದುಕಿನ ಸುಧಾರಣೆಯವರೆಗೆ ಕಾಂಗ್ರೆಸ್ ಆಡಳಿತದ ಛಾಪು ಇದೆ," ಎಂದು ಸ್ಮರಿಸಿದರು. ಕಾಂಗ್ರೆಸ್ ನೀಡಿದ ಪ್ರತಿಯೊಂದು ಪ್ರಣಾಳಿಕೆಯ ಭರವಸೆಗಳನ್ನು ಈಡೇರಿಸಲು ಪಕ್ಷ ಬದ್ಧವಾಗಿದೆ.

ಜನಪರ ಆಡಳಿತಕ್ಕಾಗಿ ಮತದಾರರು ಕಾಂಗ್ರೆಸ್ ಕೈಹಿಡಿಯಬೇಕು ಎಂದು ಮನವಿ ಮಾಡಿದರು. ನಂತರ ತಿಕ್ಕರಿಪುರ ವಿಧಾನಸಭಾ ಕ್ಷೇತ್ರದಲ್ಲಿ ಸಚಿವರು ಬೃಹತ್ ರೋಡ್ ಶೋ ನಡೆಸಿದರು. ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಅವರು ಕೆಳಗಿನ ಅಂಶಗಳನ್ನು ಒತ್ತಿ ಹೇಳಿದರು. ಕಾಂಗ್ರೆಸ್ ಕೇವಲ ಅಧಿಕಾರಕ್ಕಾಗಿ ಇರುವ ಪಕ್ಷವಲ್ಲ, ಇದು ಸ್ವಾತಂತ್ರ್ಯ ಪೂರ್ವದಿಂದಲೂ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ಬಂದಿರುವ ಸಂಘಟನೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಜನಪರ ಗ್ಯಾರಂಟಿ ಯೋಜನೆಗಳು ಮತ್ತು ಅಭಿವೃದ್ಧಿ ಮಾದರಿಗಳು ಇಡೀ ದೇಶಕ್ಕೆ ಮಾದರಿಯಾಗಿವೆ. ಇದೇ ರೀತಿಯ ಸಮಗ್ರ ಅಭಿವೃದ್ಧಿ ಕೇರಳದಲ್ಲೂ ಮುಂದುವ–ರಿಯಲು ಕಾಂಗ್ರೆಸ್ ಗೆಲುವು ಅನಿವಾರ್ಯ. "ಸರ್ವ ಜನಾಂಗದ ಶಾಂತಿಯ ತೋಟ" ನಿರ್ಮಿಸಲು, ಆರ್ಥಿಕ ಮತ್ತು ಶೈಕ್ಷಣಿಕ ಸಮಾನತೆ ಸಾಧಿಸಲು ಮತದಾರರು ಹಸ್ತದ ಗುರುತಿಗೆ ಮತ ನೀಡಬೇಕು ಎಂದು ಕರೆ ನೀಡಿದರು. ಸಚಿವರ ಪ್ರಚಾರದ ವೇಳೆ ಸ್ಥಳೀಯ ಕಾಂಗ್ರೆಸ್ ಮುಖಂಡರು,ಅಪಾರ ಸಂಖ್ಯೆಯ ಸಾರ್ವಜನಿಕರು ಭಾಗವಹಿಸಿ ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿದರು. ಪ್ರಚಾರದ ಉದ್ದಕ್ಕೂ 'ಕಾಂಗ್ರೆಸ್ ಗೆಲುವಿನ ಘೋಷಣೆಗಳು' ಮುಗಿಲು ಮುಟ್ಟಿದ್ದವು.

# ಏಪ್ರಿಲ್ 3ರಂದು 10ನೇ ತರಗತಿ ವಿದ್ಯಾರ್ಥಿಗಳಿಗೆ ನೇತಾಜಿ ಟ್ಯಾಲೆಂಟ್ ಹಂಟ್ ಪರೀಕ್ಷೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಪ್ರತಿಷ್ಠಿತ ನೇತಾಜಿ ಶಿಕ್ಷಣ ಸಂಸ್ಥೆಯ ಪಿ.ಯು. ಕಾಲೇಜಿನಲ್ಲಿ 2026–27ನೇ ಸಾಲಿನ ಪ್ರಥಮ ವರ್ಷದ ವಿಜ್ಞಾನ ವಿಭಾಗಕ್ಕೆ ಉಚಿತ ಹಾಗೂ ಶುಲ್ಕ ರಿಯಾಯಿತಿ ಪ್ರವೇಶಕ್ಕಾಗಿ ಏಪ್ರಿಲ್ 3 ರಂದು ಶುಕ್ರವಾರ ನೇತಾಜಿ ಸೈನ್ಸ್ ಕಾಲೇಜಿನಲ್ಲಿ ಟ್ಯಾಲೆಂಟ್ ಹಂಟ್ ಪರೀಕ್ಷೆಯನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಕೆ. ವಿಜಯಲಕ್ಷ್ಮೀ ತಿಳಿಸಿದ್ದಾರೆ.**

ಈ ಕುರಿತು ಮಾತನಾಡಿದ ಅವರು, ಪ್ರಸ್ತುತ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರಾಯಚೂರು ಜಿಲ್ಲೆಯ ಎಲ್ಲಾ ತಾಲೂಕಿನ ವಿದ್ಯಾರ್ಥಿಗಳು ಈ ಪರೀಕ್ಷೆಯನ್ನು ಬರೆಯಬಹುದು ಎಂದು ತಿಳಿಸಿದರು. ಪರೀಕ್ಷೆಯು ಏಪ್ರಿಲ್ 3 ರಂದು ಬೆಳಿಗ್ಗೆ 10:30 ರಿಂದ 12:00 ಗಂಟೆಯವರೆಗೆ ನಡೆಯಲಿದ್ದು,





10ನೇ ತರಗತಿಯ ಪಠ್ಯಕ್ರಮ ಆಧರಿಸಿ ಬಹು ಆಯ್ಕೆಯ 60 ಪ್ರಶ್ನೆಗಳು ಕೇಳಲಾಗುತ್ತವೆ. ಇದರಲ್ಲಿ ವಿಜ್ಞಾನ ವಿಷಯದಿಂದ 30 ಪ್ರಶ್ನೆಗಳು ಹಾಗೂ ಗಣಿತದಿಂದ 30 ಪ್ರಶ್ನೆಗಳು ಇರಲಿವೆ. ಪರೀಕ್ಷೆಯ ಅವಧಿ ಒಂದು ಗಂಟೆಯಾಗಿದ್ದು, ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಬರೆಯುವ ಅವಕಾಶ ಇರುತ್ತದೆ.


ವಿದ್ಯಾರ್ಥಿಗಳು ಶಾಲಾ ಗುರುತಿನ ಚೀಟಿ ಹಾಗೂ 10ನೇ ತರಗತಿಯ ಹಾಲ್ ಟಿಕೆಟ್ ಕಡ್ಡಾಯವಾಗಿ ತರಬೇಕು ಎಂದು ತಿಳಿಸಿದರು. ಈ ಪ್ರತಿಭಾ ಪರೀಕ್ಷೆಯಲ್ಲಿ ಪ್ರಥ–ಮ ಬಹುಮಾನವಾಗಿ ಲ್ಯಾಪ್ಟಾಪ್, ದ್ವಿತೀಯ ಬಹುಮಾನವಾಗಿ ಸ್ಮಾರ್ಟ್ ಟ್ಯಾಬ್ ಸೇ–ರಿದಂತೆ ಇತರೆ ನಗದು ಬಹುಮಾನಗಳನ್ನು ನೀಡಲಾಗುತ್ತದೆ. ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕದಲ್ಲಿ ಗಣನೀಯ ರಿಯಾಯಿತಿ ದೊರೆಯಲಿದ್ದು, ಟಾಪ್ 5 ವಿದ್ಯಾರ್ಥಿಗಳಿಗೆ ಸಂಪೂರ್ಣ ಉಚಿತ ಪ್ರವೇಶ ನೀಡಲಾಗುತ್ತದೆ. ಪರೀಕ್ಷೆಯ ನಂತರ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯೂ ಇರಲಿದೆ. ಈ ಅವಕಾಶವನ್ನು ಎಲ್ಲ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳುವಂತೆ ಕೆ. ವಿಜಯಲಕ್ಷ್ಮೀ ಕೋರಿದ್ದಾರೆ.

# ವಿದ್ಯಾರ್ಥಿಗಳಿಂದ ಭರ್ಜರಿ ಸ್ಪಂದನೆ ಬಿ.ವಿ.ಆರ್ ಟ್ಯಾಲೆಂಟ್ ಸರ್ಚ್ ಪರೀಕ್ಷೆ ಯಶಸ್ವಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಬಿ ವಿ ಆರ್ ಇಂಟ–ರ್ ನ್ಯಾಷನಲ್ ಶಾಲಾ ಕಟ್ಟಡದಲ್ಲಿ ಭಾನುವಾರ ನಡೆದ ಬಿ.ವಿ.ಆರ್ ಟ್ಯಾಲೆಂಟ್ ಸರ್ಚ್ ಪರೀಕ್ಷೆ ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ಪರೀಕ್ಷೆಯ ಉದ್ದೇಶ ಹಾಗೂ ವಿದ್ಯಾರ್ಥಿಗಳ ಪ್ರತಿಭೆಯನ್ನು ಉತ್ತೇಜಿಸುವ ಬಗ್ಗೆ ಅಧ್ಯಕ್ಷ ಬಿ.ವಿ.ರೆಡ್ಡಿ ಮಾತನಾಡಿದರು.**

ಯು ಕೆ ಜಿ ರಿಂದ 8ನೇ ತರಗತಿ ವರೆಗೆ ಬೆಳಿಗ್ಗೆ ಹಾಗೂ ಮಧ್ಯಾಹ್ನ ಅವಧಿಯಲ್ಲಿ ಪರೀಕ್ಷೆ ನಡೆಸಲಾಗಿದ್ದು, ಮಾನ್ವಿ ತಾಲೂಕು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಿಂದ



ಸುಮಾರು 2000 ವಿದ್ಯಾರ್ಥಿಗಳು ಭಾಗವಹಿಸಿ ಪರೀಕ್ಷೆಯನ್ನು ಬರೆದರು. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮೆಡಲ್ ಹಾಗೂ ಪ್ರಮಾಣಪತ್ರಗಳನ್ನು ನೀಡಲಾಯಿತು. ಈ ಟ್ಯಾಲೆಂಟ್ ಸರ್ಚ್ ಪರೀಕ್ಷೆಯ ಅಭೂತಪೂರ್ವ ಯಶಸ್ಸಿಗೆ ಸಂತೋಷ ವ್ಯಕ್ತಪಡಿಸಿದ ಸಿ.ಇ.ಓ ಶಿವರಾಜ್ ಹಾಗೂ ಅಧ್ಯಕ್ಷ ಬಿ.ವಿ.ರೆಡ್ಡಿ, ತಮ್ಮ ಮಕ್ಕಳನ್ನು ಪರೀಕ್ಷೆಗೆ ಕರೆತಂದ ಪಾಲಕರಿಗೆ ಧನ್ಯವಾದಗಳನ್ನು ತಿಳಿಸಿದರು.

# ಭಗವಾನ ಮಹಾವೀರರ ಜಯಂತೋತ್ಸವ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದಲ್ಲಿ ಜೈನ ಸಮುದಾಯದ ವತಿಯಿಂದ ಭಗವಾನ ಮಹಾವೀರರ ಜಯಂತ್ಯುತ್ಸವವನ್ನು ಭಕ್ತಿ, ಶ್ರದ್ಧೆ, ಸಂಭ್ರಮಗಳಿಂದ ಸೋಮವಾರ ನೆರವೇ–ರಿಸಲಾಯಿತು.**

**ಜಯಂತ್ಯುತ್ಸವ ದ ಪ್ರಯುಕ್ತ ಬೆಳಿಗ್ಗೆ ಮೂಲ ತೀರ್ಥಂಕರ ಭಗವಾನ ಆದಿನಾಥನ ಮೂರ್ತಿಗೆ ಪಂಚಾಮೃತ ಭಿಷೇಕ ಮಾಡಲಾಯಿತು.**

ನಂತರ ಬೀಮನ ಭಾವಿಯಲ್ಲಿ ಗಂಗಸ್ಥಳ ಮುಗಿಸಿಕೊಂಡು ವಾದ್ಯ ವೈಭವಗಳೊಂದಿಗೆ ಪಟ್ಟಣದ ಪ್ರಮುಖ ಬೀ ಪಲ್ಲಕ್ಕಿ ಉತ್ಸವ, ಕಳಸ ಹಾಗೂ ಶೋಭಾ ಯಾತ್ರೆ ಜರುಗಿತು. ದೇವಸ್ಥಾನಕ್ಕೆ ಮರಳಿದ ನಂತರ ಭಗವಾನ ತೋರ್ಥಂಕರ ಮಹಾವೀರನ ಭವ್ಯ ಮೂರ್ತಿಗೆ ಪಂಚಾಮೃತ ಭಿಷೇಕ ನೆರವೇರಿಸಲಾಯಿತು. ತೊಟ್ಟಿಲು, ನಾಮಕರಣ,, ಮಹಾಮಂಗಳಾರಾತಿ



ನಂತರ ಪ್ರಸಾದ ವಿತರಣೆ ಮಾಡಲಾಯಿತು.

ಉತ್ಸವದಲ್ಲಿ ಸಮಾಜದ ಪ್ರಮುಖರಾದ ವಜ್ರಕುಮಾರ ಪ್ರಥಮಶೆಟ್ಟಿ, ಎಸ್.ಬಿ.ಸುರಪುರ, ಗಂಗಣ್ಣ ಸುರಪುರ, ಎಸ್. ಆರ್.ಹುಬ್ಬಳ್ಳಿ, ಶ್ರೀಪಾಳ ಸಂಗ್ಮಿ, ವಿ.ಎನ್. ಯಾತಗಿರಿ, ಗುಂಡುರಾವ್ ಧನಪಾಲ. ಪ್ರಕಾಶ ಸುರಪುರ, ಸುರೇಶ ದೇವೂರ, ರತ್ನಪ್ಪ ಪ್ರಥ–ಮಶೆಟ್ಟಿ,ನೇಮಿನಾಥ ಧನಪಾಲ, ಪದ್ಮಾವತಿ ಮಹಿಳಾ ಮಂಡಳಿಯ ಸದಸ್ಯರು ಸೇರಿದಂತೆ ನೂರಾರು ಭಕ್ತರು ಪಾಲ್ಗೊಂಡಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಏರೋಸ್ಪೇಸ್ ಎಂಜಿನಿಯರಿಂಗ್

ಏರೋಸ್ಪೇಸ್ ಎಂಜಿನಿಯರಿಂಗ್ ಕೋರ್ಸ್‌ಗಳು ವಿಮಾನ, ಉಪಗ್ರಹಗಳು ಮತ್ತು ಬಾಹ್ಯಾಕಾಶ ನೌಕೆಗಳ ವಿನ್ಯಾಸ, ಪರೀಕ್ಷೆ ಮತ್ತು ತಯಾರಿಕೆಯನ್ನು ಕಲಿಸುತ್ತವೆ. ಏರೋಸ್ಪೇಸ್ ಎಂಜಿನಿಯರಿಂಗ್ ಕ್ಷೇತ್ರವು ಏರೋನಾಟಿಕಲ್ ಎಂಜಿನಿಯರಿಂಗ್ ಮತ್ತು ಆಸ್ಟ್ರೋನಾಟಿಕಲ್ ಎಂಜಿನಿಯರಿಂಗ್‌ನ ಮಿಶ್ರಣವಾಗಿದೆ. ಏರೋಡೈನಾಮಿಕ್ಸ್, ಪ್ರೊಪಲ್ಷನ್, ಸ್ಟ್ರಕ್ಚರ್, ಫ್ಲೈಟ್ ಮೆಕ್ಯಾನಿಸಂ, ಕಂಟ್ರೋಲ್ ಸಿಸ್ಟಮ್ಸ್, ಥರ್ಮೋಡೈನಾಮಿಕ್ಸ್, ಇತ್ಯಾದಿಗಳು ಏರೋನಾಟಿಕಲ್ ಎಂಜಿನಿಯರಿಂಗ್ ಕೋರ್ಸ್‌ಗಳು ಮತ್ತು ಆಸ್ಟ್ರೋನಾಟಿಕಲ್ ಎಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಒಳಗೊಂಡಿರುವ ಕೆಲವು ಪ್ರಮುಖ ವಿಷಯಗಳಾಗಿವೆ. ಈ ಕ್ಷೇತ್ರದಲ್ಲಿ ನೀವು ಬಿಟೆಕ್, ಎಂಟೆಕ್, ಬಿಇ, ಎಂಇ, ಪಿಎಚ್‌ಡಿ, ಡಿಪ್ಲೊಮಾ ಮತ್ತು ಪ್ರಮಾಣಪತ್ರ ಮಟ್ಟದ ಕೋರ್ಸ್‌ಗಳನ್ನು ಕಾಣಬಹುದು. ವಿಮಾನ ತಯಾರಿಕೆ, ರಕ್ಷಣಾ ಮತ್ತು ಮಿಲಿಟರಿ, ವಿಮಾನಯಾನ ಸಂಸ್ಥೆಗಳು, ಡಿಜಿಸಿಎ, ಆರ್ & ಡಿ, ಶಿಕ್ಷಣ, ಇತ್ಯಾದಿಗಳು ಏರೋಸ್ಪೇಸ್ ಎಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಪ್ರಮುಖ ಉದ್ಯೋಗ ಕ್ಷೇತ್ರಗಳಾಗಿವೆ. ಆಸಕ್ತಿ ಇದ್ದರೆ, ಭಾರತದಲ್ಲಿನ ಏರೋಸ್ಪೇಸ್ ಎಂಜಿನಿಯರಿಂಗ್ ಕೋರ್ಸ್‌ಗಳ ಕುರಿತು ಹೆಚ್ಚಿನ ವಿವರಗಳನ್ನು ಪಡೆಯಲು ನೀವು ಲೇಖನವನ್ನು ಓದುವುದನ್ನು ಮುಂದುವರಿಸಬಹುದು. ಅರ್ಹತೆ (Eligibility) 12ನೇ ತರಗತಿ (PUC) Physics, Chemistry, Mathematic ಕಡ್ಡಾಯ ಉತ್ತಮ ಗಣಿತ ಮತ್ತು ವಿಜ್ಞಾನ ಜ್ಞಾನ JEE Main / KCET / ಇತರೆ ಪ್ರವೇಶ ಪರೀಕ್ಷೆಗಳು

## ಸಿಂಧನೂರಿನಲ್ಲಿ ಗೃಹ ಬಳಕೆ ಸಿಲಿಂಡರ್ ಗಾಗಿ ಏಜೆನ್ಸಿ ಮುಂದೆ ಸಾಲುಗಟ್ಟಿ ನಿಂತ ಜನರು

**ಕಮರ್ಷಿಯಲ್ ಸಿಲಿಂಡರ್ ಸಿಗದೆ ಅನೇಕ ಹೋಟೆಲ್ ಗಳು ಬಾಗಿಲು ಹಾಕಿವೆ. ತಿಂಡಿ ತಿನಿಸಿಗಾಗಿ ಗ್ರಾಹಕರು ಹೋಟೇಲ್ ಗಳಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಕಮರ್ಷಿಯಲ್ ಸಿಲಿಂಡರ್ ಅಭಾವ ಇದೆ, ಆದ-'ರೆ ಗೃಹ ಬಳಕೆ ಸಿಲಿಂಡರ್ ಗಳ ಅಭಾವ ಇಲ್ಲ ಎಂದು ಆಹಾರ ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದಾರೆ. ನಗರದಲ್ಲಿ ಗೃಹ ಬಳಕೆಯ ಸಿಲಿಂಡರ್ ಗಾಗಿ ಜನರು ಸಾಲುಗಟ್ಟಿ ನಿಂತಿರುವ ದೃಶ್ಯವಂತೂ ಏಜೆನ್ಸಿ ಅಂಗಡಿಗಳ ಮುಂದೆ ಕಂಡು ಬರುತ್ತಿದೆ.**





ನಗರದ ಗ್ಯಾಸ್ ಏಜೆನ್ಸಿ ಮುಂದೆ ಸಿಲಿಂಡರ್ ಗಾಗಿ ನೂರಾರು ಜನರು ಖಾಲಿ ಸಿಲಿಂಡರ್ ಗಳನ್ನು ಹಿಡಿದು ಸಾಲುಗಟ್ಟಿ ನಿಂತಿದ್ದು ಕಂಡು ಬಂತು, ಕಮರ್ಷಿಯಲ್ ಸಿಲಿಂಡರ್ ಜೊತೆಗೆ ಗೃಹ ಬಳಕೆ ಸಿಲಿಂಡರ್ ಅಭಾವ ಸೃಷ್ಟಿಯಾಗಿದೆ. ಕಮರ್ಷಿಯಲ್ ಸಿಲಿಂಡರ್ ಗಳ ಕೊರತೆ ಇದೆ. ಆದ್ರೆ ಗೃಹ ಬಳಕೆ ಸಿಲಿಂಡರ್ ಕೊರತೆ ಇಲ್ಲ, ಯಾವುದೇ ಕಾರಣಕ್ಕೂ ಕೃತಕ ಅಭಾವ ಸೃಷ್ಟಿಸುವ ಏಜೆನ್ಸಿ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಆಹಾರ ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದು, ನಗರದಲ್ಲಿ ಕಮರ್ಷಿಯಲ್ ಜೊತೆಗೆ ಗೃಹ ಬಳಕೆ ಸಿಲಿಂಡರ್ ಗಳ ಕೊರತೆ ಇದೆ ಎನ್ನುವುದಕ್ಕೆ ಸಿಲಿಂಡರ್ ಗಾಗಿ ಜನರು ಗ್ಯಾಸ್ ಏಜೆನ್ಸಿ ಅಂಗಡಿಗಳ ಮುಂದೆ ಸಾಲುಗಟ್ಟಿ ನಿಂತಿರುವುದೇ ಸಾಕ್ಷಿ.

ಕಮರ್ಷಿಯಲ್ ಸಿಲಿಂಡರ್ ಗಳು ಸಿಗದೆ ಇರುವುದರಿಂದ ನಗರದಲ್ಲಿ ಹಲವಾರು ಹೋಟೇಲ್ ಗಳು ಈಗಾಗಲೇ ಬಂದ್ ಮಾಡಲಾಗಿದೆ. ಕೆಲವು ಹೋಟೇಲ್ ಮಾಲೀಕರು ದುಬಾರಿ ಹಣ ನೀಡಿ ಸಿಲಿಂಡರ್ ತಂದರೆ, ಇನ್ನು ಕೆಲವರು ಗೃಹ ಬಳಕೆಯ ಸಿಲಿಂಡರ್ ಗಳನ್ನು ತಂದು ಹೋಟೇಲ್ ನಡೆಸುವುದು ಕಂಡು ಬಂದಿದೆ. ಇಲಾಖೆ ಸಿಲಿಂಡರ್ ಅಭಾವ ಇಲ್ಲ ಎನ್ನುತ್ತದೆ. ಸಿಲಿಂಡರ್ ಗಾಗಿ ಜನರು ಸಾಲುಗಟ್ಟಿ ಏಜೆನ್ಸಿ ಮುಂದೆ ನಿಂತಿರುವುದು ಎಲ್ಲೆಡೆ ಕಾಣುತ್ತದೆ. ಹಾಗಾದರೆ ಸಿಲಿಂಡರ್ ಅಭಾವ ಸೃಷ್ಟಿಸುತ್ತಿರುವವರು ಯಾರು ? ಇದಕ್ಕೆ ಯಾರು ಹೊಣೆಗಾರರು ? ಕೂಡಲೇ ಅಧಿಕಾರಿಗಳು ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು ಎನ್ನುವುದು ಗ್ರಾಹಕರು ಬೇಡಿಕೆಯು ಆಗಿದೆ.

## ಐಪಿಎಲ್ ಟಿಕೆಟ್ ವಿವಾದ: ರಾಜಕೀಯ ವಲಯದಲ್ಲಿ ಕಾವೇರಿದ ಚರ್ಚೆ :ಶಾಸಕರ ಬೇಡಿಕೆಗೆ ವಿಜಯೇಂದ್ರ ವಿರೋಧ



ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಉಚಿತ ಐಪಿಎಲ್ ಟಿಕೆಟ್‌ಗಳಿಗಾಗಿ ಶಾಸಕರು ಬೇಡಿಕೆಯಿಟ್ಟಿರುವುದು ರಾಜ್ಯ ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಕಾಂಗ್ರೆಸ್‌ನ ಕೆಲವು ಸದಸ್ಯರು ಶಾಸಕರಿಗೆ ತಲಾ 5 ಟಿಕೆಟ್ ನೀಡಬೇಕು, ಪಂದ್ಯ ವೀಕ್ಷಣೆಗೆ ಪ್ರತ್ಯೇಕ ಗ್ಯಾಲರಿ ವ್ಯವಸ್ಥೆ ಮಾಡಬೇಕು ಎಂದು ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರಿಗೆ ಒತ್ತಾಯಿಸಿದ್ದರು. ಸಭಾಧ್ಯಕ್ಷ ಯು.ಟಿ.ಖಾದರ್ ಕೂಡ ಇದನ್ನು ಬಲವಾಗಿ ಪ್ರತಿಪಾದಿಸಿದ್ದರು.**

ಈ ಕುರಿತು ಪ್ರತಿಕ್ರಿಯೆ ನೀಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು, ಆಡಳಿತ ಪಕ್ಷ, ವಿಪಕ್ಷಗಳ ಶಾಸಕರ ಹೇಳಿಕೆಯನ್ನು ಗಮನಿಸಿದ್ದೇನೆ. ವೈಯಕ್ತಿಕವಾಗಿ ಅವರ ಹೇಳಿಕೆಗಳನ್ನು ಒಪ್ಪುವುದಿಲ್ಲ. ರಾಜಕಾರಣಿಗಳೆಂದರೆ ಜನಸಾಮಾನ್ಯರು ನಮ್ಮನ್ನು ಯಾವ ರೀತಿ ನೋಡುತ್ತಾರೆ ಎಂಬುದನ್ನು ಪತ್ರಿಕೆಗಳು, ಟಿ.ವಿ. ಗಳಲ್ಲಿ ನೋಡುತ್ತಿದ್ದೇವೆ. ಕಳೆದ ಬಾರಿ ಇದೇ ಐಪಿಎಲ್ ಮ್ಯಾಚ್ ಸಂದರ್ಭದಲ್ಲಿ ಆಡಳಿತ ಪಕ್ಷದ ಮೂರ್ಖತನದಿಂದ 11 ಜನ ಮುಗ್ಧರು ಪ್ರಾಣ ಕಳೆದುಕೊಂಡಿದ್ದರು.

ಅದನ್ನು ರಾಜ್ಯದ, ದೇಶದ ಜನರು ಮರೆತಿಲ್ಲ. ಈ ಸಂದರ್ಭದಲ್ಲಿ ಇಂತಹ ಹೇಳಿಕೆಗಳ ಅವಶ್ಯಕತೆ ಇತ್ತೇ ಎಂಬುದು ನನಗಂತೂ ಅರ್ಥವಾಗುವುದಿಲ್ಲ. ನಾನಿದರ ಪರವಾಗಿ ಇಲ್ಲ. ಒಬ್ಬ ಶಾಸಕ, ಜನಪ್ರತಿನಿಧಿ ಆಗಿರುವವರು ಜನಸಾಮಾನ್ಯರಿಗಿಂತ ವಿಭಿನ್ನ, ವಿಐಪಿ ಎಂಬುದು ಖಂಡಿತವಾಗಿ ಒಳ್ಳೆಯ ಬೆಳವಣಿಗೆ ಅಲ್ಲ. ಇದಕ್ಕೆ ನನ್ನ ಬೆಂಬಲ ಇಲ್ಲ ಎಂದು ಸ್ಪಷ್ಟಪಡಿಸಿದರು.

## 94 ಸಾವಿರ ಟನ್ ಎಲ್‌ಪಿಜಿ ಹೊತ್ತ ಎರಡು ಹಡಗುಗಳು ಭಾರತದತ್ತ

ನೈಜ್ಯ ದೆಸೆ ನ್ಯೂಸ್

**ನವದೆಹಲಿ: ಬರೊಬ್ಬರಿ 94,000 ಟನ್‌ಗಳಷ್ಟು ಎಲ್‌ಪಿಜಿ ಸರಕು ಹೊತ್ತ ಎರಡು ಭಾರತೀಯ ಹಡಗುಗಳು ಇಂದು ಯುದ್ಧಪೀಡಿತ ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿವೆ ಎಂದು ತಿಳಿದುಬಂದಿದೆ. ಶೀಘ್ರದಲ್ಲೇ ಈ ಹಡಗುಗಳು ಭಾರತವನ್ನು ಪ್ರವೇಶಿಸುವ ನಿರೀಕ್ಷೆಯಿದೆ ಎಂದು ಪೆಟ್ರೋಲಿಯಂ ಸಚಿವಾಲಯ ಹೇಳಿಕೆ ನೀಡಿದೆ.**



ಸುಮಾರು 94 ಸಾವಿರ ಟನ್‌ಗಳಷ್ಟು ಎಲ್‌ಪಿಜಿ ಸರಕು ಟ್ಯಾಂಕರ್‌ಗಳನ್ನು ಹೊತ್ತ 2 ಹಡಗುಗಳು ಹಾರ್ಮುಜ್ ಜಲಸಂಧಿಯನ್ನ ಸುರಕ್ಷಿತವಾಗಿ ದಾಟಿದ್ದು, ಭಾರತದ ತೀರಗಳತ್ತ ಸಾಗಿವೆ. ಒಂದು ಟ್ಯಾಂಕರ್ ಮುಂಬೈಗೆ ತೆರಳುತ್ತಿದ್ದು, ನಾಳೆ ಮುಂಬೈ ಬಂದರಿಗೆ ಬರುವ ನಿರೀಕ್ಷೆಯಿದೆ. ಇನ್ನೊಂದು ಟ್ಯಾಂಕರ್ ಹೊತ್ತ ಹಡಗು ಏಪ್ರಿಲ್ 1 ರಂದು ನವ ಮಂಗಳೂರು ಬಂದರಿಗೆ ಬರುವ ನಿರೀಕ್ಷೆಯಿದೆ ಎಂದು ತಿಳಿಸಿದೆ. ಎಲ್‌ಎಸ್‌ಇಜಿ ಹಡಗು ಟ್ರ್ಯಾಕಿಂಗ್ ದತ್ತಾಂಶದ ಪ್ರಕಾರ, ಈಗಾಗಲೇ ಭಾರತದ 4 ಟ್ಯಾಂಕರ್‌ಗಳು ಹಾರ್ಮುಜ್ ಜಲಸಂಧಿಯನ್ನ ಸುರಕ್ಷಿತವಾಗಿ ದಾಟಿವೆ. ಇನ್ನೂ 3 ಹಡಗುಗಳು ಜಲಸಂಧಿಯ ಪಶ್ಚಿಮ ವಿಭಾಗದಲ್ಲಿ ಸಿಲುಕಿವೆ ಎನ್ನಲಾಗಿದೆ. ಇರಾನ್ ಮಿತ್ರರಾಷ್ಟ್ರಗಳಿಗೆ ಹಾರ್ಮುಜ್ ಜಲಸಂಧಿ ದಾಟಲು ಅವಕಾಶ ನೀಡಿದ ಬೆನ್ನಲ್ಲೇ ಭಾರತೀಯ ಅಧಿಕಾರಿಗಳು ಸಮನ್ವಯ ಸಾಧಿಸಿ, ಒಂದೊಂದೇ ಹಡಗುಗಳನ್ನು ಹೊರತರುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಈಗಾಗಲೇ ಒಟ್ಟು 4 ಭಾರತೀಯ ಎಲ್‌ಪಿಜಿ ಟ್ಯಾಂಕರ್‌ಗಳು ಹಾರ್ಮುಜ್ ಜಲಸಂಧಿಯ ಮೂಲಕ ಸುರಕ್ಷಿತವಾಗಿ ಭಾರತ ತಲುಪಿವೆ. 92,612 ಟನ್ ಎಲ್‌ಪಿಜಿ ಹೊತ್ತ ಪೈನ್ ಗ್ಯಾಸ್ ಮತ್ತು ಜಗ್ ವಸಂತ್ ಮಾರ್ಚ್ 26 ಮತ್ತು ಮಾರ್ಚ್ 28 ರ ನಡುವೆ ಭಾರತೀಯ ಬಂದರುಗಳನ್ನು ತಲುಪಿದ್ದವು. ಅದಕ್ಕೂ ಮೊದಲು, ಸುಮಾರು 92,712 ಟನ್ ಎಲ್‌ಪಿಜಿ ಟ್ಯಾಂಕರ್ ಹೊತ್ತ ಎಂಟಿ ಶಿವಾಲಿಕ್ ಮತ್ತು ಎಂಟಿ ನಂದಾ ದೇವಿ ಹಡಗು ಕ್ರಮವಾಗಿ ಮಾರ್ಚ್ 16 ರಂದು ಗುಜರಾತ್‌ನ ಮುಂಡ್ರಾ ಬಂದರಿಗೆ ಮತ್ತು ಮಾರ್ಚ್ 17 ರಂದು ರಾಜ್ಯದ ಕಾಂಡ್ಲಾ ಬಂದರಿಗೆ ತಲುಪಿದ್ದವು.

## ಕರುಣೆಯ ಕಾರುಣ್ಯ ಆಶ್ರಮದ ಸುಜಾತ ಹಿರೇಮಠ ಅವರಿಗೆ "ಎಕ್ಸ್ ಲೆಂಟ್ ಹಾನರ್ ಮಹಿಳಾ ಸಾಧಕಿ" ಪ್ರಶಸ್ತಿ ಪುರಸ್ಕಾರ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಬೆಂಗಳೂರು-ರಾಜಧಾನಿಯ ಪ್ರತಿಷ್ಠಿತ 'ದಿ ಚಾನ್ಸೆಲರ್ ಪೆವಿಲಿಯನ್ ಇಂಟರ್ ನ್ಯಾಷನಲ್' ಹೋಟೆಲ್‌ನಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆಯ ವಿಶೇಷ ಸಮಾರಂಭದಲ್ಲಿ, ಸಿಂಧನೂರಿನ ಕರುಣೆಯ ಕಾರುಣ್ಯ ಆಶ್ರಮದ ಪ್ರಮುಖ ಸೇವಾಕರ್ತರಾದ ಶ್ರೀಮತಿ ಸುಜಾತ ಚನ್ನಬಸವ ಸ್ವಾಮಿ ಹಿರೇಮಠ (ಹರೇಟನೂರು) ಅವರಿಗೆ "ಎಕ್ಸ್ ಲೆಂಟ್ ಹಾನರ್ ಅಂತರಾಷ್ಟ್ರೀಯ ಮಹಿಳಾ ಸಾಧಕಿ" ಎನ್ನುವ ಶ್ರೇಷ್ಠ ಪ್ರಶಸ್ತಿಯಾನ್ನು ಕರ್ನಾಟಕ ಸರ್ಕಾರದ ಸಚಿವರಾದ ರಾಮಲಿಂಗಾರೆಡ್ಡಿ ಹಾಗೂ ಖ್ಯಾತ ನಟಿ ಮೇಘನಾ ಗಾಂವ್ಕರ್ ಇವರುಗಳ ಸಮಕ್ಷಮದಲ್ಲಿ ಗೌರವ ಪೂರ್ವಕವಾಗಿ ಪ್ರಶಸ್ತಿಯನ್ನು ವಿತರಿಸಿ ಗೌರವಿಸಲಾಯಿತು.**




ಅನಾಥರು, ಹಿರಿಯ ನಾಗರಿಕರು ಹಾಗೂ ಸಮಾಜದ ಶೋಷಿತ ವರ್ಗದವರ ಪರವಾಗಿ ಅವರು ಕೈಗೊಂಡಿರುವ ನಿರಂತರ ಸಮಾಜಮುಖಿ ಮತ್ತು ನಿಸ್ವಾರ್ಥ ಸೇವಾ ಕಾರ್ಯಗಳನ್ನು ಗುರುತಿಸಿ ಈ ಪ್ರತಿಷ್ಠಿತ ಗೌರವವನ್ನು ಸಮರ್ಪಿಸಲಾಗಿದೆ. ಕರ್ನಾಟಕ ಸರ್ಕಾರದ ಗೌರವಾನ್ವಿತ ಸಾರಿಗೆ ಹಾಗೂ ಮುಜರಾಯಿ ದತ್ತಿ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ರಾಮಲಿಂಗಾರೆಡ್ಡಿ ಅವರು ಸುಜಾತ ಹಿರೇಮಠ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಖ್ಯಾತ ಚಲನಚಿತ್ರ ನಟಿ ಮೇಘನಾ ಗಾಂವ್ಕರ್ ಉಪಸ್ಥಿತರಿದ್ದು, ಸಾಧಕಿಯ ಸೇವಾ ಮನೋಭಾವವನ್ನು ಶ್ಲಾಘಿಸಿದರು.

ಸಿಂಧನೂರಿನ ಕರುಣೆಯ ಕಾರುಣ್ಯ ಆಶ್ರಮದ ಮೂಲಕ ನೂರಾರು ಅನಾಥರಿಗೆ ಆಸರೆಯಾಗಿರುವ ಸುಜಾತ ಹಿರೇಮಠ ಅವರು, ಕೇವಲ ಅನ್ನ-ಆಶ್ರಯ ನೀಡುವುದಷ್ಟೇ ಅಲ್ಲದೆ, ಅವರಿಗೆ ಪ್ರೀತಿ ಮತ್ತು ಘನತೆಯ ಬದುಕನ್ನು ಕಟ್ಟಿಕೊಡುವಲ್ಲಿ ಶ್ರಮಿಸುತ್ತಿದ್ದಾರೆ. ಗ್ರಾಮೀಣ ಭಾಗದ ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದು ಮತ್ತು ಆರ್ಥಿಕ ಸ್ವಾವಲಂಬನೆಗೆ ಪ್ರೋತ್ಸಾಹ ನೀಡುವ ಮೂಲಕ ಸುಜಾತ ಅವರು ಗ್ರಾಮ ಪಂಚಾಯತ್ ಸದಸ್ಯರಾಗಿಯೂ ಕೂಡ ಸೇವೆ ಸಲ್ಲಿಸಿ ಹರೇಟನೂರು ಗ್ರಾಮದಲ್ಲಿ ಅನೇಕ ಅಭಿವೃದ್ಧಿಪರ ಕಾರ್ಯಗಳನ್ನು ಮಾಡಿ ಜನರ ಪ್ರೀತಿ ವಿಶ್ವಾಸ ಗಳಿಸಿರುವ ಇವರು ಗ್ರಾಮದ ಪ್ರತಿಯೊಬ್ಬ ಸಾರ್ವಜನಿಕರಿಗೆ ತಾಯಿಯಾಗಿ ಸಹೋದರಿಯಾಗಿ ಜನರ ಕಷ್ಟಗಳಲ್ಲಿ ಭಾಗಿಯಾಗುತ್ತಿದ್ದರು.

ಯಾವುದೇ ಪ್ರತಿ ಫಲಾಪೇಕ್ಷೆಯಿಲ್ಲದೆ ಹಗಲಿರುಳು ಸಮಾಜದ ಕಟ್ಟಕಡೆಯ ವ್ಯಕ್ತಿಯ ಏಳಿಗೆಗಾಗಿ ಶ್ರಮಿಸುತ್ತಿರುವ ಇವರ ಕಾರ್ಯಕ್ಕೆ ಈ ಅಂತರಾಷ್ಟ್ರೀಯ ಮಟ್ಟದ ಮಹಿಳಾ ಸಾಧಕಿ ಪ್ರಶಸ್ತಿ ಮತ್ತಷ್ಟು ಬಲ ತುಂಬಿದೆ. "ಸೇವೆ ಎನ್ನುವುದು ಕೇವಲ ಕೆಲಸವಲ್ಲ, ಅದು ಬದುಕಿನ ಧರ್ಮ. ಈ ಪ್ರಶಸ್ತಿ ನನ್ನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ," ಎಂದು ಪ್ರಶಸ್ತಿ ಸ್ವೀಕರಿಸಿದ ಬಳಿಕ ಸುಜಾತ ಹಿರೇಮಠ ತಮ್ಮ ಅನಿಸಿಕೆ ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಹಲವಾರು ಮಹಿಳಾ ಸಾಧಕಿಯರು ಕಾರುಣ್ಯ ಆಶ್ರಮದ ಸಂಪೂರ್ಣ ಕರ್ತವ್ಯವನ್ನು ತಿಳಿದುಕೊಂಡು ಹ್‌ಟ-ರೇಟನೂರು ಎನ್ನುವ ಗ್ರಾಮಕ್ಕೆ ಕೀರ್ತಿ ತಂದು ತಾವು ಕರುನಾಡಿನ ಕರುಣಾಮಯಿ ಗಳಾಗಿದ್ದೀರಿ ಎಂದು ಹಾರೈಕೆಗಳ ಮೂಲಕ ಸೇವೆಗೆ ಪ್ರೋತ್ಸಾಹಿಸಿದರು.

ಈ ಸಂದರ್ಭದಲ್ಲಿ ಆಶ್ರಮದ ಹಿತೈಷಿಗಳು, ಅಭಿಮಾನಿಗಳು ಹಾಗೂ ಸಮಾಜದ ವಿವಿಧ ಗಣ್ಯರು ಸುಜಾತ ಚನ್ನಬಸವ ಸ್ವಾಮಿ ಹಿರೇಮಠ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಆಶ್ರಮದ ವತಿಯಿಂದ ಸದಸ್ಯರಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್. ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು. ಮತ್ತು ಸಲಹಾ ಸಮಿತಿಯ ಸದಸ್ಯರುಗಳಾದ ಅಣ್ಣಪ್ಪ ಗೌಡ ಮೇಟಿ ಗೌಡ್ರು. ರೇಣುಕಾ ಸ್ವಾಮಿ ಬಿಎಸ್‌ಎನ್‌ಎಲ್ ಇಲಾಖೆ, ಸಿಂಧನೂರು. ವೀರಭದ್ರಗೌಡ ಗಿಣಿವಾರ. ಸುಧಾ ವೀರಭದ್ರಗೌಡ ಗಿಣಿವಾರ. ಶರಣಪ್ಪ ನಾಯಕ ಕಸಬಾ ಲಿಂಗಸೂಗೂರು. ಅಂಬು ಪಾಟೀಲ್ ರೇಖಲಮರಡಿ.. ವೀರೇಶ ಫೋಟೋಗ್ರಾಫರ್. ವಿನಾಯಕ. ಬಸವ ಸ್ವಾಮಿ. ಹಾಗೂ ಅನೇಕರು ಉಪಸ್ಥಿತರಿದ್ದರು.

**ನಮ್ಮ ಈ ಸಿಂಧನೂರಿನ ಕರುಣೆಯ ಕಾರುಣ್ಯ ಕುಟುಂಬದಿಂದ ಈ ಪ್ರಶಸ್ತಿ ಹಾಗೂ ಕಾರುಣ್ಯ ಆಶ್ರಮಕ್ಕೆ ಬಂದಿರುವ ಎಲ್ಲಾ ಪ್ರಶಸ್ತಿಗಳು ಆಶ್ರಮಕ್ಕೆ ಸಹಾಯ ಸಹಕಾರ ಮಾಡುವ ಮಹಾದಾನಿಗಳಿಗೆ ಅರ್ಪಣೆ ದಾನಿಗಳು ಮುಂದಿನ ದಿನಮಾನಗಳಲ್ಲಿ ಆಶ್ರಮಕ್ಕೆ ಸ್ವಂತ ಜಾಗ ಕೊಡಿಸಿದರೆ ಇಡೀ ನಮ್ಮ ಕಲ್ಯಾಣ ಕರ್ನಾಟಕದ ಕರುಣೆಯ ಮಂದಿರವನ್ನಾಗಿ ಮಾಡಲು ನಮ್ಮ ಈ ಕುಟುಂಬ ಮತ್ತು ನಮ್ಮ ಶ್ರೀಮಠ ಸೇವಾ ಟ್ರಸ್ಟ್ ಹರೇಟನೂರು ಕಂಕಣ ಬದ್ಧವಾಗಿ ನಿಂತಿದೆ. ದಾನಿಗಳಲ್ಲಿ ಕೈಮುಗಿದು ವಿನಂತಿಸಿಕೊಳ್ಳುತ್ತೇವೆ ನೀವುಗಳು ಇಟ್ಟಿರುವ ಪ್ರೀತಿ ವಿಶ್ವಾಸ ನಂಬಿಕೆಯನ್ನು ಉಳಿಸಿಕೊಂಡು ನಮ್ಮೆಲ್ಲರ ಮಾರ್ಗದರ್ಶನದಂತೆ ಕಾರುಣ್ಯ ಆಶ್ರಮದ ಕರ್ತವ್ಯ ನೆರವೇರುತ್ತದೆ**


**-ಡಾ. ಚನ್ನಬಸವ ಸ್ವಾಮಿ ಹಿರೇಮಠ**

## ಮಸ್ಕಿ ಎಪಿಎಂಸಿ ನೂತನ ಅಧ್ಯಕ್ಷ-ಉಪಾಧ್ಯಕ್ಷ ಹಾಗೂ ನಿರ್ದೇಶಕರ ಪದಗ್ರಹಣ ಸಮಾರಂಭ

### ಮಸ್ಕಿ ಕೃಷಿ ಉತ್ಪನ್ನ ಮಾರುಕಟ್ಟೆ ಅಭಿವೃದ್ಧಿಗೆ ಯೋಜನೆ ರೂಪಿಸಿ: ಶಾಸಕ ಬಸನಗೌಡ ತುರವಿಹಾಳ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಭ್ರಮರಾಂಭ ಮಲ್ಲಿಕಾರ್ಜುನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕೆಲವೇ ತಿಂಗಳುಗಳಲ್ಲಿ ಆರ್ಥಿಕಸ್ಥಿತಿ ಗಣನೀಯ ಪ್ರಮಾಣದಲ್ಲಿ ಸುಧಾರಿಸಿದ್ದು, ಇದನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಗೊಳಿಸಲು ನೂತನ ಪದಾಧಿಕಾರಿಗಳು ಶ್ರಮಿಸಬೇಕು ಎಂದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಹಾಗೂ ಆರ್.ಬಸನಗೌಡ ತುರವಿಹಾಳ ಹೇಳಿದರು.**



**ಮಸ್ಕಿ ಎಪಿಎಂಸಿ ವರ್ತಕರಿಂದ ಶಾಸಕ ಆರ್ ಬಸನಗೌಡರಿಗೆ ಸನ್ಮಾನ**

**ಮಸ್ಕಿ ಪಟ್ಟಣಕ್ಕೆ ಪೂರ್ಣ ಪ್ರಮಾಣದ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ಹಾಗೂ ನೂತನವಾಗಿ ಆಡಳಿತ ಮಂಡಳಿಯನ್ನು ರಚನೆ ಮಾಡಿರುವುದರಿಂದ ಇಲ್ಲಿನ ಎಪಿಎಂಸಿ ವರ್ತಕರ ಸಂಘದ ವತಿಯಿಂದ ಖಾದಿ ಗ್ರಾಮೋದ್ಯೋಗ ನಿಗಮದ ಅಧ್ಯಕ್ಷ ಶಾಸಕ ಆರ್ ಬಸನಗೌಡ ತುರುವಿಹಾಳರಿಗೆ ಸನ್ಮಾನಿಸಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ವರ್ತಕರ ಸಂಘದ ಪದಾಧಿಕಾರಿಗಳು ಇದ್ದರು.**

ಇಲ್ಲಿನ ಎಪಿಎಂಸಿ ಆವರಣದಲ್ಲಿ ಸೋಮವಾರ ನಡೆದ ಎಪಿಎಂಸಿ ನೂತನ ಅಧ್ಯಕ್ಷ-ಉಪಾಧ್ಯಕ್ಷ ಹಾಗೂ ನಿರ್ದೇಶಕರ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ಈ ಎಪಿಎಂಸಿ ವ್ಯಾಪ್ತಿಯಲ್ಲಿ ಮಸ್ಕಿ, ಸಿಂಧನೂರು ಮತ್ತು ಲಿಂಗಸುಗೂರು ತಾಲೂಕುಗಳಿವೆ. 3 ತಾಲೂಕಿನ ರೈತರ ಕಷ್ಟ-ನಷ್ಟಗಳಿಗೆ ಸಮಿತಿ ಸೂಕ್ತ ರೀತಿಯಲ್ಲಿ ಸ್ಪಂದಿಸುವ ಮತ್ತು ಬೆಳೆಗೆ ವೈಜ್ಞಾನಿಕ ಬೆಲೆ ದೊರೆಯಲು ಅವಕಾಶ ಮಾಡಿಕೊಡಬೇಕು. ದಲ್ಲಾಳಿಗಳಿಂದ ರೈತರಿಗೆ ಯಾವುದೇ ರೀತಿಯಲ್ಲೂ ನಷ್ಟವಾಗದಂತೆ ಎಚ್ಚರವಹಿಸಬೇಕು. ಹರಾಜು, ಮಾರಾಟ, ಹಣ ಸಂದಾಯ ಸೇರಿದಂತೆ ಪ್ರತಿ ಪ್ರಕ್ರಿಯೆಯೂ ಪಾರದರ್ಶಕವಾಗಿ ನಡೆಯಬೇಕು.

ಯಾವ ರೈತರೂ ಮೋಸಕ್ಕೊಳಗಾಗದ ರೀತಿಯಲ್ಲಿ ಸಮಿತಿ ನಿಗಾವಹಿಸಿ ಕಾರ್ಯೋನ್ಮುಖವಾಗಬೇಕು ಎಂದರು. ತಾಲೂಕು ಕೇಂದ್ರವಾಗಿದ್ದರೂ ಪೂರ್ಣ ಪ್ರಮಾಣದ ಕಚೇರಿಗಳು ಆರಂಭವಾಗಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಮುಂಬರುವ ದಿನಗಳಲ್ಲಿ ಸರಕಾರಿ ಕಚೇರಿಗಳು ಆರಂಭಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು. ನಾನೊಬ್ಬ ರೈತನ ಮಗನಾಗಿ ರೈತರ ಪರವಾಗಿರುವ ಕೆಲಸ ಮಾಡಲು ಪ್ರಮಾಣಿಕವಾಗಿ ಶ್ರಮಿಸುವೆ. ಸರ್ಕಾರ ರೈತರಿಗೆ ಹಲವಾರು ಯೋಜನೆಗಳು ಜಾರಿಗೆ ತಂದಿದೆ ಅವುಗಳನ್ನು ಸದುಪಯೋಗ ಪಡೆದುಕೊಳ್ಳಬೇಕು.

**ತಾಲೂಕು ಕೇಂದ್ರದಲ್ಲಿ ಪೂರ್ಣ ಪ್ರಮಾಣದ ಕಚೇರಿಗಳನ್ನು ಆದಷ್ಟು ಬೇಗ ಆರಂಭಿಸಲು ಅಗತ್ಯ ಕ್ರಮಗಳನ್ನು ಕೈಗೊಂಡು, ಮಸ್ಕಿ ಪಟ್ಟಣವನ್ನು ಸುಂದರವನ್ನಾಗಿಸಲು ಯೋಜನೆಗಳನ್ನು ರೂಪಿಸಿ ಅಭಿವೃದ್ಧಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ.**

**-ಶಾಸಕ ಆರ್ ಬಸನಗೌಡ ತುರುವಿಹಾಳ**

ಮುಂಬರುವ ಜಿಲ್ಲಾ ಮತ್ತು ತಾಲೂಕು ಪಂಚಾಯತಿ ಸೇರಿದಂತೆ ಎಲ್ಲ ಚುನಾವಣೆಗಳನ್ನು ಗೆಲ್ಲಲ್ಲು ಶ್ರಮಿಸಬೇಕೆಂದು ಹೇಳಿದರು.

ನಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ ಕಾರ್ಯಕ್ರಮದಲ್ಲಿ ಮಾತನಾಡಿ ನೂತನ ಸಮಿತಿ ವ್ಯಾಪ್ತಿಗೆ ಒಳಪಡುವ ಎಲ್ಲ ತಾಲೂಕುಗಳ ರೈತರ ಹಿತ ಕಾಪಾಡುವುದು ಮೊದಲ ಆದ್ಯತೆಯಾಗಬೇಕು. ರೈತರ ಬೆಳೆಗಳಿಗೆ ಉತ್ತಮ ದರ ಸಿಗುವಂತೆ ಮಾರುಕಟ್ಟೆ ಸಮನ್ವಯತೆ ಕಾಪಾಡಲು ಪ್ರಾಧಾನ್ಯತೆ ನೀಡಬೇಕು. ಕೃಷಿಕರು ಮತ್ತು ಮಾರುಕಟ್ಟೆ ಕುರಿತ ಸಮಗ್ರ ಮಾಹಿತಿ ಮತ್ತು ಸಂಪರ್ಕ ಇರುವುದರಿಂದ ಸಮಿತಿಯನ್ನು ಮತ್ತಷ್ಟು ಸದೃಢವಾಗಿ ಕಟ್ಟಲು ಶ್ರಮಿಸಲಾಗುವುದು. ಎಲ್ಲ ಪದಾಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಸಹಭಾಗಿತ್ವದಲ್ಲಿ ಕೃಷಿಕ ಸ್ನೇಹಿ ಎಪಿಎಂಸಿಯಾಗಿ ಎಪಿಎಂಸಿಯನ್ನು ಅಭಿವೃದ್ಧಿ ಪಡಿಸಬೇಕೆಂದರು.

ಪದಗ್ರಹಣ: ಎಪಿಎಂಸಿಯ ನೂತನ ಅಧ್ಯಕ್ಷರಾಗಿ ಸಿದ್ದನಗೌಡ ಮಾಟೂರು, ಉಪಾಧ್ಯಕ್ಷರಾಗಿ ನಿಂಗಯ್ಯ ಮಲ್ಲದಗುಡ್ಡ, ನಿರ್ದೇಶಕರಾಗಿ ಪಂಪಣ್ಣ ಮಟ್ಟೂರು, ಅಮರೇಗೌಡ ಹಾಲಾಪೂರ, ಕುಸುಮಾ ಬಲವಂತರಾಯ ವಟಗಲ್,

ದುರಗಪ್ಪ ಕ್ಯಾತ್ನಟ್ಟಿ, ಮೌಲಪ್ಪ ಹಂಪನಾಳ, ಮಾನಪ್ಪ ಅಡವಿಭಾವಿ ತಾಂಡ, ಪೂರ್ಣಿಮಾ ವೀರೇಶ ಪಾಟೀಲ್, ಹಿರೇ ಮೌಲಸಾಬ ಪರಾಪೂರ, ದುರಗಪ್ಪ ಕಟ್ಟಿಮನಿ, ಹಡಗಲಿ, ಮಲ್ಲರೆಡ್ಡೆಪ್ಪ ಜಕ್ಕೆರಮಡು, ಅಮರೇಶ ಗೋನವಾರ, ಹುಲಿಗೆಮ್ಮ ಗೊಲ್ಲರಹಟ್ಟಿ, ಸಂಗಣ್ಣ ಎಲಿಗಾರ ಪದಗ್ರಹಣ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮಂಜುನಾಥ ಭೋಗಾವತಿ, ಕೆಪಿಸಿಸಿ ಸದಸ್ಯ ನಲ್ಲಾ ವೆಂಕಟೇಶ್ವರಾವ್, ಅಂದಾನಪ್ಪ ಗುಂಡಳ್ಳಿ, ಹನುಮಂತಪ್ಪ ಮುದ್ದಾಪೂರ, ಮಲ್ಲನಗೌಡ ಸೇರಿದಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧಿಕಾರಿಗಳು ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿದ್ದರು.